ಕರ್ನಾಟಕ ವಿಧಾನಸಭೆ

ಮಂಗಳವಾರ 18ನೇ ಜುಲೈ 2006ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ
ವಿಷಯ: ಶಾಸಕರಾದ ಶ್ರೀ ಸಿದ್ದರಾಮಯ್ಯನವರಿಗೆ ಹೇಳಿಕೆ ಮಾಡಲು ಅನುಮತಿ ನಿರಾಕರಣೆಯನ್ನು ಪುನರ್ ವಿಮರ್ಶೆ ಮಾಡಲು ಮನವಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು: ಈಗ ಕೆಲವು ಕಾಗದಪತ್ರಗಳಿವೆ, ಅವುಗಳನ್ನು ಸದನದಲ್ಲಿ ಮಂಡಿಸಬೇಕಾಗಿದೆ.

ಡಾ: ಹೆಚ್.ಸಿ. ಮಹದೇವಪ್ಪ: ಅಧ್ಯಕ್ಷರೇ, ನಮ್ಮ ಡಿಮ್ಯಾಂಡ್ ಇನ್ನೂ ಹಾಗೆಯೇ ಪೆಂಡಿಂಗ್ ಇದೆಯಲ್ಲಾ ಅಧ್ಯಕ್ಷರೇ?

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಕಾಗದಪತ್ರಗಳು ಅಲ್ಲಿಯೇ ಇರುತ್ತವೆ, ಎಲ್ಲಿಯೂ ಹೋಗುವುದಿಲ್ಲ. ನನಗೆ ಒಂದು ನಿಮಿಷ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ಕಳೆದ 20 ದಿನಗಳಿಂದ ಸದನ ಹೇಗೆ ನಡೆದಿದೆ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು.

(ಅಡಚಣೆ)

ಮಾನ್ಯ ಸದಸ್ಯರು: ಇಲ್ಲಿ ನಿಯಮ ಉಲ್ಲಂಘಿಸಿ ಮಾಡಿ ಎನ್ನತಕ್ಕಂಥ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಮಾನ್ಯ ಸಿದ್ಧರಾಮಯ್ಯನವರೇ, ನೀವೇನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಅದರ ಮೇಲೆ ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಸಿದ್ಧರಾಮಯ್ಯ: ನಿಮ್ಮ ರೂಲಿಂಗ್ ಅನ್ನು ಪುನರ್‌ವಿಮರ್ಶೆ ಮಾಡಬೇಕೆಂದು ನನ್ನ ಮನವಿ.

ಶ್ರೀ ಜಗದೀಶ್ ಶೆಟ್ಟರ್: ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಮತ್ತೆ ಅದರ ಬಗ್ಗೆ ಪುನರ್‌ವಿಮರ್ಶೆ ಮಾಡುವ ಅವಶ್ಯಕತೆಯಿಲ್ಲ.

(ಅಡಚಣೆ)

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ನಾವು ಸುಮಾರು ಒಂದು ವಾರದಿಂದ ಗಮನಿಸುತ್ತಿದ್ದೇವೆ. ನಮ್ಮ ಕ್ಷೇತ್ರಗಳಲ್ಲಿರುವ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳಿದ್ದೇವೆ. ಅದಕ್ಕೆ ಯಾವುದೇ ಅವಕಾಶವಿಲ್ಲದೆ ಕೇವಲ ಗದ್ದಲದಲ್ಲಿ ಸದನ ನಡೆಯುತ್ತಿದೆ. ಈ ರೀತಿಯಾದರೆ ನಾವೇನು ಮಾಡಬೇಕು ಅಧ್ಯಕ್ಷರೇ?

(ಅಡಚಣೆ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಸಿ.ಟಿ. ರವಿ: ಸದನ ನಡೆಸಲು ಅವಕಾಶ ಕೊಡದೆ ಸುಮ್ಮನೆ ಕಾಲಹರಣ ಮಾಡುತ್ತಿದ್ದಾರೆ.

(ಅಡಚಣೆ)

ಅಧ್ಯಕ್ಷರು: ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ. ಸಿದ್ಧರಾಮಯ್ಯನವರು ಏನು ಹೇಳುತ್ತಾರೆಂದು ಕೇಳೋಣ.

(ಅಡಚಣೆ)

ಮಾನ್ಯ ಸದಸ್ಯರು: ಅಧ್ಯಕ್ಷರೇ, ಸದನ ಮುಗಿಸಿಕೊಂಡು ನಮ್ಮ ಕ್ಷೇತ್ರಗಳಿಗೆ ಹೋದಾಗ ಕ್ಷೇತ್ರದ ಜನ ನಮ್ಮ ಸಮಸ್ಯೆಗಳ ಬಗ್ಗೆ ಒಂದು ತಿಂಗಳಿನಿಂದ ಏನು ಮಾಡಿದಿರಿ ಎಂದು ನಮ್ಮನ್ನು ಕೇಳುತ್ತಾರೆ, ಅವರಿಗೆ ಏನು ಉತ್ತರ ಕೊಡಬೇಕು?

ಅಧ್ಯಕ್ಷರು: ಕೇಳಿ, ದಯಮಾಡಿ, ಸಿದ್ಧರಾಮಯ್ಯನವರು ಒಂದು ಹೇಳಿಕೆಯನ್ನು ಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದಾರೆ. ಅದರ ಬಗ್ಗೆ ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ. ಆದರೂ ಅವರು

ಏನೋ ಮಾತನಾಡಬೇಕೆಂದು ಕೇಳುತ್ತಿದ್ದಾರೆ, ಅವರು ಏನು ಹೇಳುತ್ತಾರೆಂಬುದನ್ನು ಕೇಳೋಣ. ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಕೊಟ್ಟಿದ್ದೀರಿ. Nobody can prevent me from speaking. ನನಗೆ ಮಾತನಾಡಲಿಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ, ದಯಮಾಡಿ ನೀವೆಲ್ಲರೂ ಕುಳಿತುಕೊಳ್ಳಿ, ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ, ಆಮೇಲೆ ಹೇಳಿ. ಬೇಡವೆಂದವರ್‍ಯಾರು? You should seek the permission of the chair and speak.

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಚರ್ಚೆ ಮಾಡಲಿಕ್ಕೆ ಇರತಕ್ಕಂಥ ಸದನ ಇದು. ಅವರು ಹೊಸ ವಿಷಯಗಳನ್ನು ಹೇಳಲಿಕ್ಕೆ ಎದ್ದುನಿಂತಿದ್ದಾರೆ, ಅವರು ಏನು ಹೇಳುತ್ತಾರೆಂಬುದನ್ನು ಕೇಳೋಣ, ತಾವೆಲ್ಲಾ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ: ಅಧ್ಯಕ್ಷರೆ, ಸಿದ್ಧರಾಮಯ್ಯನವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಆಡಳಿತ ಪಕ್ಷದವರು ಮಾತನಾಡಿದಾಗ ಸಂತೆ ಎನ್ನುತ್ತಾರೆ, ಬೇರೆಯವರೆಲ್ಲಾ ಮಾತನಾಡುವಾಗ ಸಂತೆ ಆಗುವುದಿಲ್ಲವೇ?

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಸದಸ್ಯರು ಏನಾದರೂ ಹೇಳುವುದಕ್ಕೆ ನಿಂತಾಗ ಅದನ್ನು ಕೇಳುವ ತಾಳ್ಮೆಯನ್ನು ವಹಿಸಬೇಕು. ಅವರು ಮಾತನಾಡಿದ ನಂತರ ನಿಮ್ಮದೇನಾದರೂ ಹೇಳುವುದಿದ್ದರೆ ನೀವು ಹೇಳುವಿರಂತೆ ಈಗ ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

ಅಧ್ಯಕ್ಷರು: ಆಯಿತು, ನಿಮ್ಮ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆಯೂ ಮಾತನಾಡಲಿಕ್ಕೆ ನಿಮಗೆ ಅವಕಾಶ ಕೊಡುತ್ತೇನೆ, ಈಗ ಎಲ್ಲರೂ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಉಪ ಮುಖ್ಯಮಂತ್ರಿಗಳು ಇಲ್ಲೇ ಕುಳಿತಿದ್ದಾರೆ, ಅವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿರುವಂತಹವರು. ಅವರ ಪಕ್ಷದ ಸದಸ್ಯರು, ಅಧ್ಯಕ್ಷರು ಹೇಳಿದರೂ

ಕೇಳದೆ ಮಾತನಾಡತಕ್ಕಂಥ ಈ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರಲ್ಲಾ ಇದು ಈ ಸಭೆಗೆ ಗೌರವ ತರತಕ್ಕಂಥದ್ದಲ್ಲ. ಸದನ ನಡೆಸತಕ್ಕಂಥ ರೀತಿ ಇದಲ್ಲ.

(ಅಡಚಣೆ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ಮನೆಯಲ್ಲಿ ಈ ರೀತಿ ಗೊಂದಲವಾದರೆ ಸದನವನ್ನು ನಡೆಸುವುದು ಕಷ್ಟ. ಮಾನ್ಯ ಸಿದ್ಧರಾಮಯ್ಯನವರು ಒಂದೆರಡು ನಿಮಿಷ ಮಾತನಾಡಲಿಕ್ಕೆ ಎದ್ದು ನಿಂತಿದ್ದಾರೆ. ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಏನು ಮಾತನಾಡ ಬೇಕೆಂದಿದ್ದಾರೋ ಮಾತನಾಡಲಿ, ಆನಂತರ ನೀವು ಮಾತನಾಡಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರೀತಿಯಾಗಿ ಅವರ ಸಹನೆ ಕಳೆದುಕೊಂಡು ಮಾತನಾಡತಕ್ಕಂಥ ಅಗತ್ಯವಿಲ್ಲ. ನಾನು ಈ ಸದನದ ಕಾಲವನ್ನು ವ್ಯಯ ಮಾಡಬೇಕು, ವ್ಯರ್ಥ ಮಾಡಬೇಕು ಎನ್ನುವಂಥವನಲ್ಲ, ನಾನು ಈ ರಾಜ್ಯದಲ್ಲಿ ಹಣಕಾಸಿನ ಸಚಿವನಾಗಿ ಕೆಲಸ ಮಾಡಿದ್ದೇನೆ. ಯಾವುದೇ ಚರ್ಚೆಯಿಲ್ಲದೆ ಈ ಸದನ ಹಾಗೆಯೇ ಹೋಗಬೇಕು ಎಂಬುದರಲ್ಲಿ ನಂಬಿಕೆ ಇಟ್ಟುಕೊಂಡಿರುವವನಲ್ಲ, ನಾನು ಕಳೆದ ನಾಲ್ಕು ಬಾರಿ ಇಲ್ಲಿ ಬಂದಾಗ ಯಾವತ್ತೂ ಕೂಡ ಈ ಸದನವನ್ನು ದುರುಪಯೋಗ ಮಾಡಿಕೊಂಡಿರತಕ್ಕಂಥ ನಿದರ್ಶನಗಳು ಇಲ್ಲ, ಇವತ್ತಿನವರೆಗೂ ಸಹ ಅಂತಹ ನಿದರ್ಶನಗಳು ಇಲ್ಲ, ಸದಸ್ಯರು ಮಾತನಾಡುವಾಗ ಮಧ್ಯೆ ಪ್ರವೇಶ ಮಾಡಿ ತೊಂದರೆ ಕೊಡತಕ್ಕಂಥ ಕೆಲಸವನ್ನೂ ಕೂಡ ಮಾಡಿಲ್ಲ. ಬಹಳ dignified ಆಗಿ ಈ ಸದನದಲ್ಲಿ ನಾನು ಸದಸ್ಯನಾಗಿ ನಡೆದುಕೊಳ್ಳುವಲ್ಲಿ ಪ್ರಾಮಾಣಿಕನಾಗಿ ಪ್ರಯತ್ನವನ್ನು ಮಾಡಿದ್ದೇನೆ. ನಾನು ಈ ಸದನದಲ್ಲಿ ಎರಡು ದಿನ ಧರಣಿ ಮಾಡಿ, ಸದನದ ಕಲಾಪಗಳನ್ನೆಲ್ಲಾ ನಾಶ ಮಾಡಬೇಕು, ಚರ್ಚೆಯಾಗಬಾರದು ಎಂದು ಹೇಳುವುದಿಲ್ಲ. ನಾನು ಯಾವತ್ತೂ ಪ್ರಜಾಪ್ರಭುತ್ವದಲ್ಲಿ Parliamentary system of Democracy ಯಲ್ಲಿ ಬಲವಾದ ನಂಬಿಕೆಯನ್ನಿಟ್ಟು ಕೊಂಡಿರತಕ್ಕಂಥವನು. ಎಲ್ಲಾ ಡಿಮ್ಯಾಂಡ್ಸ್‌ಗಳ ಮೇಲೆ ಚರ್ಚೆ ಆಗಬೇಕಾಗಿತ್ತು. ಈ ಸದನ ಯಾವತ್ತು ಶುರುವಾಯಿತು? ಈ ಸದನವನ್ನು ಕರೆದಿರುವ ಉದ್ದೇಶವೇನು? ಹೌದು, ಎಂಟು ದಿವಸಗಳ ಕಾಲ ನೀವು ಏನು ಮಾಡುತ್ತಿದ್ದಿರಿ? ನೈಸ್ ವಿಷಯದ ಬಗ್ಗೆ ಎಂಟು ದಿನಗಳ ಕಾಲ

ಚರ್ಚೆಯಾಯಿತು. ಬೆಟ್ಟ ಅಗೆದು ಇರುವೆಯನ್ನೂ ಕೂಡ ಹಿಡಿಯಲಿಲ್ಲ, ಇಲಿಯನ್ನು ಹಿಡಿಯಲಿಕ್ಕೂ ಹೋಗಲಿಲ್ಲ ಅಂತ ....

(ಅಡಚಣೆ)

ಅಧ್ಯಕ್ಷರು: ನೀವು ಏನು ಹೇಳಬೇಕೆಂದಿದ್ದೀರಿ ಅದನ್ನು ಹೇಳಿ, ಇಲ್ಲವೆಂದರೆ ಸುಮ್ಮನೆ ಗಲಾಟೆಯಾಗುತ್ತದೆ.

(ಅಡಚಣೆ)

ಶ್ರೀ ಸಿದ್ಧರಾಮಯ್ಯ: ನನಗೆ ನನ್ನ ಅಭಿಪ್ರಾಯವನ್ನು ತಿಳಿಸಲಿಕ್ಕೆ ಈ ಸದನದಲ್ಲಿ ಅಧಿಕಾರವಿಲ್ಲವೇ? What is this? ನಾನು ಯಾರ ಮೇಲಾದರೂ ಆರೋಪ ಮಾಡುತ್ತಿದ್ದೇನೆಯೇ?

ಶ್ರೀ ಎನ್. ಚೆಲುವರಾಯಸ್ವಾಮಿ: ಈಗ ಸದನವನ್ನು ನಡೆಯುವುದಕ್ಕೆ ಬಿಡಬೇಕೆಂಬುದಲ್ಲ, ನೈಸ್ ವಿಚಾರವಿರಬಹುದು, ಮತ್ತೊಂದು ವಿಚಾರವಾಗಿರ ಬಹುದು, ಅಸೆಂಬ್ಲಿ ಪ್ರಾರಂಭವಾದಂದಿನಿಂದ ಇದುವರೆಗೆ ಈ ಸದನದ ಕಲಾಪಕ್ಕೆ ಯಾರು ಅಡ್ಡಿಮಾಡುತ್ತಿದ್ದಾರೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಿನ್ನೆ ಮೊನ್ನೆ ಧರಣಿ ಮಾಡಿದವರು ಯಾರು? ಇದೆಲ್ಲಾ ಬಿಟ್ಟು ಏನು ವಿಷಯವಿದೆ ಅದರ ಬಗ್ಗೆ ಸ್ಪೀಕರ್‌ರವರಿಗೆ convince ಮಾಡುವ ರೀತಿಯಲ್ಲಿ ಅವರು ಮಾತನಾಡಲಿ, ಸದನವನ್ನು ಯಾವ ರೀತಿ ನಡೆಸಬೇಕೆಂಬುದನ್ನು ಯಾರಿಂದಲೂ ಕಲಿಯಬೇಕಾಗಿಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಅನೇಕರು ವಿರೋಧ ಪಕ್ಷದಲ್ಲಿದ್ದಾಗ, ನಾನು ನಾಲ್ಕು ಬಾರಿ ಟ್ರೆಜರಿ ಬೆಂಚ್‌ನಲ್ಲಿ ಕುಳಿತುಕೊಳ್ಳುವಂಥ ಅವಕಾಶ ಸಿಕ್ಕಿತ್ತು. ಇಲ್ಲಿ ಯಾರ್‍ಯಾರು ವಿರೋಧಪಕ್ಷದವರು ಹೇಗೆ ಕೆಲಸ ಮಾಡಿದರು ಎನ್ನುವಂಥದ್ದೂ ಕೂಡ ಗೊತ್ತಿದೆ. ಎಂತಹ ಪ್ರಾಮುಖ್ಯವಾದ ವಿಚಾರಗಳ ಮೇಲೆ ಚರ್ಚೆಯಾಗಿದೆ. ಎಂತಹ ಪ್ರಾಮುಖ್ಯವಾದ ವಿಚಾರಗಳ ಮೇಲೆ ಈ ಸದನದ ಸಮಯವನ್ನು ತೆಗೆದುಕೊಂಡಿದ್ದಾರೆ, ಹಾಳು ಮಾಡಿದ್ದಾರೆ ಎಲ್ಲವನ್ನೂ ಕೂಡ narrate ಮಾಡಬಲ್ಲೆ, ಇವೆಲ್ಲವನ್ನೂ ನಾನು ಸಾಕಷ್ಟು ನೋಡಿದ್ದೇನೆ, ಅದೆಲ್ಲವನ್ನೂ ಹೇಳಲಿಕ್ಕೆ ಹೋಗುವುದಿಲ್ಲ, ನಾನು ಈ ಸದನದಲ್ಲಿ ಇಷ್ಟು ವರ್ಷವಿದ್ದೇನೆ, ನಾನು ಎರಡು ಸಾರಿ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಸುಮಾರು ನಾಲ್ಕು ಬಾರಿ ಈ ಸದನದಲ್ಲಿ ಶಾಸಕನಾಗಿ ಕೆಲಸ ಮಾಡಿದ್ದೇನೆ. ಹಣಕಾಸು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ನಾನು ಒಂದು

ಹೇಳಿಕೆ ಮಾಡಲು ನಿಯಮಾವಳಿಯಲ್ಲಿ ಅವಕಾಶವಿಲ್ಲದೇ ಹೋಗಿದ್ದರೆ ನಾನು ಒತ್ತಾಯ ಮಾಡಲಿಕ್ಕೆ ಹೋಗುತ್ತಾ ಇರಲಿಲ್ಲ. ಸಂಪ್ರದಾಯ ಇಲ್ಲದೇ ಹೋಗಿದ್ದರೆ ನಾನು ಒತ್ತಾಯ ಮಾಡಲಿಕ್ಕೆ ಹೋಗುತ್ತಿರಲಿಲ್ಲ, ಈ ಮನೆಯಲ್ಲಿ ಸಂಪ್ರದಾಯಗಳನ್ನು ಮಾಡಿದ್ದಾರೆ, ಸಂಪ್ರದಾಯಗಳು ಆಗಿದ್ದಾವೆ. ಹಿಂದೆ Predecessors ಅದಕ್ಕೆಲ್ಲಾ ಅವಕಾಶ ಮಾಡಿಕೊಟ್ಟಿದ್ದಾರೆ. ಅದನ್ನು ಉಪಯೋಗಿಸಿ ಕೊಂಡು ನಾನೂ ಕೂಡ ಏತಕ್ಕೋಸ್ಕರ ಇವತ್ತು ಜಾತ್ಯಾತೀತ ಜನತಾದಳದಿಂದ ದೂರವಾಗುತ್ತಾ ಇದ್ದೇನೆ, ಆ ಪಕ್ಷದ ಸದಸ್ಯತ್ವಕ್ಕೆ ಏತಕ್ಕೆ ರಾಜೀನಾಮೆ ಕೊಡುತ್ತಾ ಇದ್ದೇನೆ, ಏತಕ್ಕಾಗಿ ಕಾಂಗ್ರೆಸ್ ಪಕ್ಷ ಸೇರುತ್ತಾ ಇದ್ದೇನೆ ಎನ್ನತಕ್ಕಂಥದ್ದನ್ನು ರಾಜ ಮಾರ್ಗದಲ್ಲಿ ಹೇಳಿ, ಇದೇ ಸದನದಲ್ಲಿ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆಯನ್ನು ಎದುರಿಸಿ ಹೋಗಬೇಕು ಎಂಬ ನಿರ್ಧಾರವನ್ನು ಮಾಡಿ ಇಲ್ಲಿ ಹೇಳಿಕೆ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೆ. ನಿಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿದೆ, ಒಂದು ದಿನ ಮನವಿ ಮಾಡಿದೆ, ನೀವು ನಿಯಮಾವಳಿಗಳಲ್ಲಿ ಅವಕಾಶ ಇಲ್ಲ ಅಂತ ಹೇಳಿದಿರಿ, ಮತ್ತೆ ಪ್ರಿಸಿಡೆಂಟ್ ಇಲ್ಲ ಅಂತ ಹೇಳಿದಿರಿ, ಪ್ರಿಸಿಡೆಂಟ್ ನಿನ್ನೆ ಎಲ್ಲಾ ತಂದು ತೋರಿಸಿದ್ದೇವೆ, ಆದರೂ ನೀವು ಅವಕಾಶ ಕೊಡಲಿಲ್ಲ. ಆದರೆ ನನ್ನಿಂದ ನಾನು ಧರಣಿ ಮಾಡುತ್ತಿದ್ದೇನೆ ಆ ಕಾರಣಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಉತ್ತರ ಕೊಟ್ಟಿದ್ದಾರೆ. ಪತ್ರಿಕೆಗಳಲ್ಲಿ, ನಾನು ಹೇಳಬೇಕಾದುದ್ದನ್ನೆಲ್ಲಾ ತಡೆ ಹಿಡಿಯುತ್ತಿದ್ದಾರೆ, ಅಂದರೆ ಅವಕಾಶ ಕೊಡುತ್ತಿಲ್ಲ. ಬೇಕು ಅಂತ ಉದ್ದೇಶಪೂರ್ವಕವಾಗಿ ಧರಣಿ ಮಾಡುವುದಕ್ಕೆ ಹೊರಟುಬಿಟ್ಟಿದ್ದಾರೆ ಅಂತ. ಆದ್ದರಿಂದ ಜನಗಳಿಗೆ ಆ ತರಹದ ಸುದ್ದಿ ಹೋಗಬಾರದು. ಇಲ್ಲಿ ಯಾರೂ ಕೂಡ ಯಾರಿಗೂ ರಕ್ಷಣೆಯಾಗಬಾರದು. ಯಾರು ಸಾರ್ವಜನಿಕ ಹಣ ಲೂಟಿ ಮಾಡಿದ್ದಾರೆ ಅವರ ಮೇಲೆ ತನಿಖೆಯಾಗಬೇಕು ಅವರಿಗೆ ಶಿಕ್ಷೆಯಾಗಬೇಕು ಎನ್ನುವುದರಲ್ಲಿ ಬಲವಾಗಿ ನಂಬಿಕೆ ಇಟ್ಟುಕೊಂಡಿರತಕ್ಕಂಥವನು ನಾನು. ಯಾರಿಗೀ ರಕ್ಷಣೆ ಮಾಡತಕ್ಕಂಥ ಕೆಲಸ ಆಗಬಾರದು. ಬರೀ ಇಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಆರೋಪ ಮಾಡುವುದರಿಂದ, ನಾವು ಆರೋಪ ಬಂದ ಮೇಲೆ ಅವರ ಮೇಲೆ ಆರೋಪ ಮಾಡಿ, ಅವರ ಮೇಲೆ ಆರೋಪಗಳು ಇವೆ ಎನ್ನುವುದರಿಂದ ನ್ಯಾಯ ಸಿಗಲಿಕ್ಕೆ ಸಾಧ್ಯವಾಗುವುದಿಲ್ಲ. ಅಥವಾ ದೋಷ ವಿಮುಕ್ತರಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತನಿಖೆಯಾಗಬೇಕು ಯಾರು ತಪ್ಪಿತಸ್ಥರಿದ್ದಾರೆ ಯಾರು ಸಾರ್ವಜನಿಕ

ಹಣ ಲೂಟಿ ಮಾಡಿದ್ದಾರೆ, ಅವರ ಮೇಲೆ ಕ್ರಮ ಆಗಬೇಕು, ಅವರ ಮೇಲೆ ಕಾನೂನಿನ ಪ್ರಕಾರ ಏನು ಶಿಕ್ಷೆಯಾಗಬೇಕೋ ಆ ಶಿಕ್ಷೆ ಆಗಬೇಕು, ಅದಕ್ಕೆ ಅಡ್ಡ ಬರತಕ್ಕಂಥಾದ್ದರಲ್ಲಿ ನಾನು ಯಾವಾಗಲೂ ಕೂಡ ಯೋಚನೆ ಮಾಡಿಲ್ಲ, ಆ ಉದ್ದೇಶವೂ ಕೂಡ ಇಲ್ಲ. ಆದಕಾರಣದಿಂದ ನಾನು ಮತ್ತೊಮ್ಮೆ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಕೊನೆಯ ಬಾರಿ ಮನವಿ ಮಾಡುತ್ತೇನೆ ಕೊನೆಯ ಬಾರಿ, ಇವತ್ತೂ ಕೂಡ ನಿಮ್ಮ ಮನಸ್ಸನ್ನು ಬದಲಾವಣೆ ಮಾಡಿ, ಪುನರ್ ವಿಮರ್ಶೆ ಮಾಡಿ ; ಈ ಸಂಪ್ರದಾಯವನ್ನು ಮತ್ತೊಮ್ಮೆ ನೋಡಿಕೊಂಡು ನೀವು ಯಾವುದೋ ಪಾರ್ಲಿಮೆಂಟ್‌ನಲ್ಲಿ ಆಗಿದೆ ಅಲ್ಲಿ ಕೊಟ್ಟಿಲ್ಲ, ಅಥವಾ ಕೇಳುವುದಕ್ಕೇ ಹೋಗಿಲ್ಲ ರಾಜೀನಾಮೆ ಕೊಟ್ಟು ಹಾಗೆಯೇ ಹೊರಟು ಹೋಗಿಬಿಟ್ಟಿದ್ದಾರೆ ಈ ತರಹ ಹೇಳದೆ ದಯವಿಟ್ಟು ಇವತ್ತು ನನಗೆ ಅವಕಾಶ ಮಾಡಿಕೊಡಬೇಕು. ಮತ್ತೊಮ್ಮೆ ತಾವು ಪುನರ್ ವಿಮರ್ಶೆ ಮಾಡಬೇಕು. ನಾನು ಮತ್ತೊಮ್ಮೆ ತಮ್ಮಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ಮತ್ತೇ ನೀವು ಅದೇ ನಿಲುವಿನಲ್ಲಿ ಮುಂದುವರೆದರೆ, ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿಯಾದ ಕ್ರಮವಲ್ಲ ಅಂತ ನನಗನ್ನಿಸುತ್ತದೆ. ನನ್ನ ಹಕ್ಕುಗಳಿಗೆ ಮೊಟಕಾಗುತ್ತದೆ ಎನ್ನತಕ್ಕಂಥ ಭಾವನೆ ನನಗೆ ಸಂಪೂರ್ಣವಾಗಿ ಬಂದಿದೆ. ಈಗಾಗಲೇ ನಾನು ನನ್ನ ಹಕ್ಕುಗಳಿಗೆ ಮೊಟಕು ಆಗಿದೆ ಎನ್ನತಕ್ಕಂಥ ಮಾತುಗಳನ್ನು ಪದೇ ಪದೇ ಹೇಳಿದ್ದೇನೆ. ಸಂಪ್ರದಾಯ ಒಂದು ವೇಳೆ ಇಲ್ಲದೇ ಹೋದರೂ ಕೂಡ, ನಿಯಮಾವಳಿ ಇಲ್ಲದೇ ಹೋದರೂ ಕೂಡ, ನಿಮಗೆ ಅಧಿಕಾರವಿದೆ. ಈ ನಿಯಮಾವಳಿಗಳನ್ನು ರಚನೆ ಮಾಡಿರತಕ್ಕಂಥಾದ್ದು ಈ ಸದನ. ಯಾವುದೇ ನಿಯಮಾವಳಿ ಒಂದು ವೇಳೆ ಅಡ್ಡ ಬಂದರೂ ಕೂಡ ಅದನ್ನು ಬದಿಗೊತ್ತಿ, ಸಸ್ಪೆಂಡ್ ಮಾಡಿ ನಿಮಗೆ ಅವಕಾಶ ಕೊಡತಕ್ಕಂಥ inherent power you are having. ಅದನ್ನಾದರೂ ಕೂಡ ಎಕ್ಸ್‌ರ್‌ಸೈಜ್ ಮಾಡಬಹುದಾಗಿತ್ತು. ಅದನ್ನೂ ಕೂಡ ಎಕ್ಸ್‌ರ್‌ಸೈಜ್ ಮಾಡದೇ ಇವತ್ತು ಯಾವುದೋ ಒತ್ತಡ ಇರಬಹುದು ಗೊತ್ತಿಲ್ಲ ನನಗೆ, ಆದರೆ ನನಗೆ ಈ ತರಹ ತಪ್ಪಿಸತಕ್ಕಂಥಾದ್ದು ನೀವು ಮೊದಲೇ ಫ್ರೀ ಆಕ್ಯುಪೈಡ್ ಆಗಿ ಕೊಡುವುದೇ ಇಲ್ಲ ಎನ್ನತಕ್ಕಂಥ ರೀತಿಯಲ್ಲಿ, ಪ್ರಿಸ್ಟೀಜ್ ರೀತಿ ತೆಗೆದುಕೊಂಡಿರತಕ್ಕಂಥಾದ್ದು, ಅದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ನನಗೆ ನಿರಾಕರಣೆ ಮಾಡುವುದೇ ಒಂದು ಕೆಟ್ಟ ಸಂಪ್ರದಾಯವಾಗುತ್ತದೆ. ಈ ಸದನದಲ್ಲಿ ; ಇನ್ನು ಮುಂದೆ, ದೊಡ್ಡ ಕೆಟ್ಟ ಸಂಪ್ರದಾಯವಾಗುತ್ತದೆ. ಈ

ಸಂಪ್ರದಾಯ ಆಗಬಾರದು, ಒಳ್ಳೇಯ ಸಂಪ್ರದಾಯ ಮುಂದುವರಿಯಬೇಕಾದರೆ ದಯಮಾಡಿ ತಾವು ನಿಮ್ಮ ನಿಲುವನ್ನು, ನಿಮ್ಮ ರೂಲಿಂಗ್‌ನ್ನು ಮತ್ತೆ ಪುನರ್ ಪರಿಶೀಲನೆ ಮಾಡಿ ನನಗೆ ಅವಕಾಶ ಕೊಡಬೇಕು. ನಾನು ಇವತ್ತು ಧರಣಿ ಕುಳಿತುಕೊಳ್ಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳ ಕ್ಷೇತ್ರದ ಅನೇಕ ವಿಚಾರಗಳು ಚರ್ಚೆಯಾಗಿಲ್ಲ. ನಿನ್ನೆ ಗಿಲಿಟಿನ್ ಮಾಡಿ ಇಡೀ ಫೈನಾನ್ಸ್ ಬಿಲ್‌ಗಳನ್ನು ಪಾಸ್ ಮಾಡಿಕೊಂಡಿರಿ. Where is the scope for you to discuss on the demands? There is no scope. There is no scope for you. If you are really interested in the development of your constituency, yesterday you should have opposed the Finance Bill. ಸುಮ್ಮನೆ ಕುಳಿತುಕೊಂಡಿರಿ ಗಿಲಿಟಿನ್ ಮಾಡುವಾಗ. ಈಗ ನಮ್ಮ ಕ್ಷೇತ್ರದ ಕೆಲಸಗಳು ಆಗಬೇಕು ಅಂತೀರಿ. ಡಿಮ್ಯಾಂಡ್ಸ್ ಮುಗಿದು ಹೋದ ಮೇಲೆ ಏನು ಚರ್ಚೆ ಮಾಡುತ್ತೀರಿ? ಫೈನಾನ್ಸ್ ಬಿಲ್ಸ್ ಪಾಸ್ ಆಯಿತು. ಅಪ್ಪರ್ ಹೌಸ್‌ಗೆ ಹೋಯಿತು. ಅಲ್ಲಿಂದ ಮತ್ತೆ ವಾಪಸ್ಸು ಬರುತ್ತದೆ. You will have no opportunity to discuss on the demands.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಸಿದ್ಧರಾಮಯ್ಯನವರೇ, ಧರಣಿ ವಾಪಸ್ಸು ತೆಗೆದುಕೊಳ್ಳಬೇಕಾಗಿತ್ತು. ಧರಣಿ ವಾಪಸ್ಸು ತೆಗೆದುಕೊಂಡು ಆಮೇಲೆ ಅವರು ಬೇರೆ ವಿಚಾರಕ್ಕೆ ಬರಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ: ಈ ತಿಂಗಳ 30ನೇ ತಾರೀಖಿನವರೆಗೂ ಕೂಡ ವೋಟ್ ಅನ್ ಅಕೌಂಟ್ ಪಾಸಾಗಿತ್ತು. ಈ ತಿಂಗಳ ಕೊನೆಯವರೆಗೂ ಕೂಡ ಫೈನಾಸ್ ಬಿಲ್ಸ್ ಪಾಸ್ ಮಾಡಬಹುದಾಗಿತ್ತು. ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇತ್ತು. ಈಗ ನಾವು ಇನ್ನೂ 17ನೇ ತಾರೀಖಿನಲ್ಲಿ ಇದ್ದೇವೆ. ಇನ್ನೂ 10 ದಿವಸ ಚರ್ಚೆ ಮಾಡುವುದಕ್ಕೆ ಅವಕಾಶ ಇತ್ತು. ನಿನ್ನೆಯೇ ಫೈನಾನ್ಸ್ ಬಿಲ್ಸ್ ಪಾಸಾಗುವಂತಹ ಅಗತ್ಯ ಇರಲಿಲ್ಲ. where was the necessity? where was the inevitability?
ಎಲ್ಲಿತ್ತು ನಿನ್ನೆಯೇ ಫೈನಾನ್ಸ್ ಬಿಲ್ಸ್ ಪಾಸ್ ಮಾಡಿಕೊಳ್ಳಬೇಕು ಅಂತ? ಅಂದರೆ ನಿಮಗೂ ಕೂಡ ಸರ್ಕಾರ ಡೆಮಾಕ್ರಸಿಯಲ್ಲಿ ಜವಾಬ್ದಾರಿ ಇಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ: ನಮಗೂ ಕೂಡ ನಿಜವಾಗಿಯೂ ದುಃಖವಾಗಿದೆ. ನೀವು ಅವಕಾಶ ಕೊಡಲಿಲ್ಲ ...

(ಅಡಚಣೆ)

ಶ್ರೀ ಸಿದ್ಧರಾಮಯ್ಯ: ನೀವು ನನಗೆ ಅವಕಾಶ ಕೊಡುವುದಿಲ್ಲ. ನಾನು ಇದನ್ನು ಪ್ರತಿಭಟಿಸಿ ನಾನು ಮತ್ತು ನಮ್ಮ ಎಲ್ಲಾ ಸದಸ್ಯರು ಇವತ್ತು ವಾಕ್ ಔಟ್ ಮಾಡುತ್ತಿದ್ದೇವೆ. ವಾಕ್ ಔಟ್ ಮಾಡುವ ತೀರ್ಮಾನ ಮಾಡುತ್ತಿದ್ದೇನೆ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ...

(ಅಡಚಣೆ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೋ ಕೇಳೋಣ. ಈ ಸದನ ಇರುವುದು ಚರ್ಚೆ ಮಾಡುವುದಕ್ಕೆ ಹಿರಿಯರು ಕೆಲವು ವಿಚಾರಗಳನ್ನು ಮಾತನಾಡಿದಾಗ ಅದನ್ನು ಕೇಳಬೇಕು. ಅದು ಸರಿ ಇಲ್ಲ ಅಂದರೆ ಈ ಕಾರಣಕ್ಕೆ ಸರಿ ಇಲ್ಲ ಅಂತ ಹೇಳಬೇಕು. ಅದು ಬಿಟ್ಟು ಇವರು 4 ಜನ ಅವರು 4 ಜನ ನಿಂತುಕೊಂಡು ಮಾತನಾಡಿದರೆ ಅದು ಸರಿಯಾಗುವುದಿಲ್ಲ. ಈಗ ಮಾನ್ಯ ವಿರೋದ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸಿದ್ಧರಾಮಯ್ಯನವರು ಕೊನೆಯದಾಗಿ ತಮಗೆ ಮನವಿ ಮಾಡಿಕೊಂಡಿದ್ದಾರೆ. ಸತತವಾಗಿ ಎರಡು ದಿನಗಳ ಕಾಲ ಈ ಸದನದಲ್ಲಿ ರಾಜೀನಾಮೆ ಏಕೆಕೊಡುತ್ತಿದ್ದೇನೆ ಅಂತ ಹೇಳಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಕೇಳಿದ್ದಾರೆ. ತಮ್ಮ ಮನವೊಲಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಾವೂ ಕೂಡ ಹೇಳಿದ್ದೇವೆ. ನಾವು ಧರಣಿ ಕುಳಿತಿದ್ದು ನಿಜ. ಏಕೆಂದರೆ ಅವರು ರಾಜ್ಯದ ಒಬ್ಬ ಹಿರಿಯ ಸದಸ್ಯರು ಅದರಲ್ಲೂ ಅವರು ಉಪ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಯಾವ ಹಿನ್ನೆಲೆಯಲ್ಲಿ ರಾಜೀನಾಮೆ ಕೊಡುತ್ತಿದ್ದಾರೆ ಎನ್ನುವುದು ರಾಜ್ಯದ ಜನತೆಗೆ ಸದಸ್ಯರಿಗೆ ಗುರುತು ಆಗಬೇಕಾಗಿದೆ.

(ಅಡಚಣೆ)

ಅಧ್ಯಕ್ಷರು: ಕುಳಿತುಕೊಳ್ಳಿ ಅವರು ಏನು ಹೇಳುತ್ತಾರೋ ಕೇಳಿ.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೇ, ಮುಖ್ಯ ಸಚೇತಕರು ಏನು ಮಾಡುತ್ತಾರೋ ಕೇಳಿ ಸ್ವಾಮಿ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಸದನದ ಹೊರಗಡೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನನ್ನ ಮೇಲೆ ಆಪಾದನೆ ಮಾಡಿದ್ದಾರೆ. ಅವರು ಮೊನ್ನೆ ಬಂದವರು. ನಾನು 35 ವರ್ಷಗಳಿಂದ ನಾನು ಮತ್ತು ಖರ್ಗೆಯವರು ಸದನದಲ್ಲಿ ಇದ್ದೇವೆ. 35 ವರ್ಷಗಳ ಕಾಲ ಜನರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಇವತ್ತು ಅವರು ಏನು ಹೇಳಿದ್ದಾರೆ, ಜನಾರ್ಧನರೆಡ್ಡಿಯವರು 150 ಕೋಟಿ ರೂಪಾಯಿಗಳ ಆಪಾದನೆ ಏನು ಮಾಡಿದ್ದಾರೆ ಅದಕ್ಕೆ ಉತ್ತರ ಕೊಡಲು ಕಾಂಗ್ರೆಸ್‌ನವರು ಅವಕಾಶ ಕಲ್ಪಿಸಿ ಕೊಡುತ್ತಿಲ್ಲ ಇವತ್ತು ಕುಂಟು ನೆಪ ಹೂಡಿ ಧರಣಿ ಮಾಡುತ್ತಿದ್ದಾರೆ. ಅದಕ್ಕೆ ನಾನು ಈ ಮಾತನ್ನು ಹೇಳಬೇಕಾಗಿದೆ ಅಂತ ಹೇಳಿದ್ದಾರೆ. ಇವತ್ತು ಸಿದ್ಧರಾಮಯ್ಯನವರು ಪದೇ ಪದೇ ಮನವಿ ಮಾಡಿದರೂ ಕೂಡ ಅವಕಾಶ ಕಲ್ಪಿಸಿ ಕೊಡುತ್ತಿಲ್ಲ. ಇದು ಒಳ್ಳೆಯ ಸಂಪ್ರದಾಯವಲ್ಲ. ಅವಕಾಶ ಕಲ್ಪಿಸಿಕೊಡಲೇಬೇಕು. ರಾಜ್ಯದ ಜನತೆ ನೋಡುತ್ತಿದ್ದಾರೆ ನಿಮ್ಮ ತೀರ್ಪಿಗೆ ಆದರೆ ಮುಖ್ಯಮಂತ್ರಿಗಳು ಹೊರಗಡೆ ಯಾಕೆ ಹೇಳುತ್ತಾರೆ, ಒಳಗಡೆ ಬಂದು ಹೇಳ್ರಿ, ಕೇಳಲು ತಯಾರಿದ್ದೇವೆ. ತಾವು ನಮ್ಮ ನಿಲುವಿಗೆ, ಅವಕಾಶ ಕಲ್ಪಿಸಿಕೊಡಬೇಕಾಗಿತ್ತು ಕೊಟ್ಟಿಲ್ಲ, ಇದಕ್ಕೆ ನಾವು ಸಿದ್ಧರಾಮಯ್ಯನವರಿಗೆ ಬೆಂಬಲಿಸಿ ಸಭಾತ್ಯಾಗ ಮಾಡುತ್ತೇವೆ. ಮತ್ತೆ ಬರುತ್ತೇವೆ. ಸಭಾತ್ಯಾಗ ಪ್ರೊಟೆಸ್ಟ್; ಇಲ್ಲಿಗೆ ಬಂದು ಮುಖ್ಯಮಂತ್ರಿಗಳು ಹೇಳುವುದನ್ನು ಕೇಳಲು ತಯಾರಿದ್ದೇವೆ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರು ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ವಿಶೇಷವಾಗಿ ಸಿದ್ಧರಾಮಯ್ಯನವರು ರೂಲ್ 332ರ ಕೆಳಗೆ ಹೇಳಿಕೆ ನೀಡಬೇಕೆಂದು ಪ್ರಯತ್ನ ಪಟ್ಟರು. ತಮಗೂ ಅವಕಾಶ ಕೇಳಿದರು. ಆದರೆ ಕಡೆಗೆ ತಾವು ಅದನ್ನು ನಿರಾಕರಿಸಿದಿರಿ.

ಅಧ್ಯಕ್ಷರು: ನೀವು ಹಿರಿಯ ಸದಸ್ಯರು ನಿಯಮ 332 ಯಾವ ಸಂದರ್ಭದಲ್ಲಿ ಅವರು ಹೇಳಿಕೆ ಮಾಡಬಹುದು ಅಂತ ಇದೆ, ನಾನೂ ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆದಾಯಿತು, ಆದರೆ ಪ್ರಿಸಿಡೆಂಟ್ಸ್ ಇದೆ ಅಂದೆವು, ಅದನ್ನೂ ನಿರಾಕರಿಸಿದಿರಿ.

ಅಧ್ಯಕ್ಷರು: ಎಲ್ಲೂ ಪ್ರಿಸಿಡೆಂಟ್ಸ್ ಇಲ್ಲ, ನೀವು 8 ಸಾರಿ ಈ ಸಭೆಗೆ ಬಂದ ಹಿರಿಯರು. ಕೋರ್ಟಿನಲ್ಲಿ ವಾದವಿವಾದ ನಡೀತದೆ; ಆಗ ಯಾವುದೇ ಹೈಕೋರ್ಟಿಗಿಂತ ಸುಪ್ರೀಂಕೋರ್ಟಿನದ್ದು ಬೈಂಡಿಂಗ್. ಆ ತರಹ ಅನೇಕ ಸಾರಿ ಲೋಕಸಭೆಯಲ್ಲಿ ಹೇಳಿಕೆ ಮಾಡಲು ಅವಕಾಶ ಕೊಟ್ಟಿಲ್ಲ. ಇದ್ದಿದ್ದರೆ ನಾನು ಹೇಳುತ್ತಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹಾಗಾದರೆ ಇಲ್ಲಿ ಶಂಕರೇಗೌಡರು ಅಡಿದ್ದು ಸುಳ್ಳಾ?

ಅಧ್ಯಕ್ಷರು: ಶಂಕರೇಗೌಡರು ಹೇಳಿಕೆ ಕೊಟ್ಟಿದ್ದು ಇಲ್ಲ, ಜಯರಾಂ ಕೊಟ್ಟಿದ್ದು ಇದೆ, ಅವರು ಪಕ್ಷದ ವೇದಿಕೆ ಉಪಯೋಗಿಸಿಕೊಂಡಿದ್ದಾರೆ. ನಾನು ಎಲ್ಲಾ ನೋಡಿ ಈ ದೇಶದ ದೊಡ್ಡ ಮನೆ ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಿರುವುದನ್ನು ಮೂರು ನಾಲ್ಕು ಸಾರಿ ಉದಾಹರಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದು ಆಯಿತು ತಾವು ಮನಸ್ಸು ಮಾಡಿದರೆ ನಿಯಮ 332ರಲ್ಲಿ ಕೊಡಬಹುದು. ಕೊಟ್ಟಿಲ್ಲ.

ಶ್ರೀ ಎನ್. ಧರಂಸಿಂಗ್: ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮಾತು ಅಡಲು ಇಷ್ಟಪಟ್ಟಿದ್ದರು ಅದಕ್ಕೆ ಅಡ್ಡಿಬರುವ ಪ್ರಯತ್ನ ನಾವು ಮಾಡುತ್ತಿದ್ದೇವೆ ಅಂತ ಹೊರಗಡೆ ಪ್ರಕಟಪಡಿಸಿದ್ದಾರೆ. ಅದಕ್ಕೇ ಅವರು ಏನೇನು ಹೇಳುತ್ತಾರೆ ಏನೇನೂ ಇಲ್ಲ ಅಂತ ಕೇಳುವುದಕ್ಕಾಗೇ ನಾವು ಧರಣಿ ಮುಕ್ತಾಯ ಮಾಡಿ ವಾಕೌಟ್ ಮಾಡುತ್ತಿದ್ದೇವೆ. ಅವರ ಮಾತು ಕೇಳಲು ಪುನಃ ಇಲ್ಲಿಗೆ ಬರುತ್ತೇವೆ ಅವರು ಏನು ಹೇಳುತ್ತಾರೋ ಕೇಳುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಎಐಪಿಜೆಡಿ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ಪ್ರಕಾಶ್: ಅಧ್ಯಕ್ಷರೇ, ಈ ತರಹದ ನಿಲುವನ್ನು ಎರಡು ದಿವಸಗಳ ಹಿಂದೆಯೇ ತೆಗೆದುಕೊಂಡಿದ್ದರೆ ಇಷ್ಟು ತೊಂದರೆ ಆಗುತ್ತಿರಲಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ನಾವು ನಿಮಗೆ ಅಡ್ಡಹಾಕುವುದಿಲ್ಲ. 4 ತಿಂಗಳಲ್ಲಿ 150 ಕೋಟಿ ರೂ. ನಮಗೆ ಸೇರಿದ್ದರೆ 20 ತಿಂಗಳಲ್ಲಿ ಎಷ್ಟು ಸೇರಿದೆ ಅಂತ ಹೇಳಿದ್ದಾರಲ್ಲಾ, ಅದರಲ್ಲಿ ನೀವೂ ಭಾಗಿಯಾಗಿದ್ದಿರಿ, ಅದೇನೇನು ಬೇಕೋ ಎಲ್ಲಾ ಹೇಳಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್: ಅಧ್ಯಕ್ಷರೇ, ಇವತ್ತಿನ ಅವರ ನಿಲುವನ್ನು ಎರಡು ದಿವಸಗಳ ಹಿಂದೆ ತೆಗೆದುಕೊಂಡಿದ್ದರೆ ನಮ್ಮ ಅಮೂಲ್ಯ ಸಮಯ ಉಳಿಯುತ್ತಿತ್ತು. ಅದರ ಜತೆಗೆ ಸುಮಾರು 45 ಸಾವಿರ ಕೋಟಿ ರೂ.ಗಳ ನಮ್ಮ ಆಯವ್ಯಯದ ಬಗ್ಗೆ ಅನೇಕ ಶಾಸಕಮಿತ್ರರು ಭಾಗವಹಿಸಿ ಅದಕ್ಕೆ ಸಲಹೆ ಸೂಚನೆ ಕೊಡಲಿಕ್ಕೆ ಅವಕಾಶವಿರುತ್ತಿತ್ತು. ಇದು ಒಂದು ಬಹಳ ದುರ್ದೈವದ ಸಂಗತಿ. ತಾವು ಯಾವುದೇ ನಿರ್ಣಯ ಕೊಟ್ಟಾಗ ಅದು ನಮಗೆ ಇಷ್ಟವಾಗಬಹುದು ಇಷ್ಟವಾಗದೇ ಹೋಗಬಹುದು, ಆ ತೀರ್ಪಿನಿಂದ ನಮಗೆ ಸಂತೋಷವಾಗದಿದ್ದರೂ ಆ ತೀರ್ಪಿಗೆ ತಲೆಬಾಗಬೇಕು ಎಂಬುದೇ ಪ್ರಜಾಪ್ರಭುತ್ವದ ಮತ್ತು ಕಾನೂನಿಗೆ ಅನುಗುಣವಾಗಿ ನಡೆಯಬೇಕು ಎಂಬ ಪ್ರಜಾಪ್ರಭುತ್ವದ ವ್ಯವಸ್ಥೆ. ತಮ್ಮ ತೀರ್ಮಾನವನ್ನು ಕೊಟ್ಟ ನಂತರ ಮನವೊಲಿಸಲು ಪ್ರಯತ್ನಮಾಡಿ ಮನರ್ವಿಮರ್ಶೆ ಮಾಡಿ ಅಂತ ಕೇಳಿಕೊಳ್ಳುವುದು ಸಹಜ. ಆದರೆ ಅದಕ್ಕೂ ಕೂಡ ಒಂದು ಮಿತಿ ಇರುತ್ತದೆ. ಎರಡು ಮೂರು ಬಾರಿ ಮಾಡಿದ ಮೇಲೆ ತಾವು ಹೇಳಿದಿರಿ, ಅಂತಹ ಸಂಪ್ರದಾಯಗಳಿಲ್ಲ, ಲೋಕಸಭೆಯಲ್ಲಿ ರಾಜ್ಯಸಭೆಯಲ್ಲಿ ಅಂತಹ ವಿಚಾರ ಪ್ರಸ್ತಾಪ ಮಾಡಿದಾಗ ಏನು ನಿರ್ಣಯವಾಗಿದೆ, ಆ ನಿರ್ಣಯವನ್ನು ಪುನವಿಮರ್ಶೆ ಮಾಡುವ ಅಗತ್ಯವಿಲ್ಲ ಅಂತ ಹೇಳಿದ ಮೇಲೆ ವಿರೋಧಪಕ್ಷದ ಶಾಸಕರು ಮತ್ತು ನಮ್ಮ ಗೆಳೆಯ ಶಾಸಕರು ಇವತ್ತಿನ ನಿರ್ಣಯ ತೆಗೆದುಕೊಂಡು ಸಹಕರಿಸಿದ್ದರೆ ಪ್ರಾಯಶಃ ಈ ಮನೆಯ ಘನತೆಯೂ ಹೆಚ್ಚುತ್ತಿತ್ತು, ತಮ್ಮ ತೀರ್ಪಿಗೆ ನಾವು ಮನ್ನಣೆ ಕೊಟ್ಟಂತೆ ಆಗುತ್ತಿತ್ತು. ಮೂರನೆಯದಾಗಿ ಅನೇಕ ವಿಷಯಗಳ ಬಗ್ಗೆ ಎಲ್ಲಾ ಸದಸ್ಯರೂ ಭಾಗವಹಿಸಿ ಮಾತನಾಡಲು ಅವಕಾಶವಿರುತ್ತಿತ್ತು. ಈಗ ನೀವು ಹೇಳಿದ್ದೀರಿ ಅಪವಾದ ಬರುತ್ತದೆ ಅಂತ ಮತ್ತೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ. 120 ವರ್ಷಗಳ ಇತಿಹಾಸ ವಿರುವ ಕಾಂಗ್ರೆಸ್‌ನವರು ಕೇಂದ್ರದಲ್ಲೂ ರಾಜ್ಯಭಾರ ಮಾಡುತ್ತಿದ್ದಾರೆ. ಹಾಗೇನೇ ಬೇರೆ 14 ರಾಜ್ಯಗಳಲ್ಲಿ ರಾಜ್ಯಭಾರ ಮಾಡುತ್ತಿದ್ದಾರೆ. ಲೋಕಸಭೆಯಲ್ಲಿ ಇಂತಹುದೇ ಸಂದರ್ಭ ಬಂದಾಗ ಯುಪಿಎನವರು ಗಿಲಿಟಿನ್ ಹಾಕಿ ತಮ್ಮ ಆಯವ್ಯಯ ಮಂಜೂರಾತಿ ಮಾಡಿಸಿಕೊಂಡಿರುವುದು ಇದೆ. ಅಂತಹ ಆ ಅಸ್ತ್ರವನ್ನು ತೀರ ಕೊನೆಯಾಗಿ ಧರಣಿ ಮಾಡುವುದಾಗಲಿ ಬಾವಿಗೆ ಬೀಳುವುದಾಗಲಿ ಅಲ್ಲಿಂದ ಘೋಷಣೆ ಕೂಗುವುದಾಗಲಿ ಧರಣಿ ಮಾಡುವ ಸಂದರ್ಭದಲ್ಲಿ ನಿಲ್ಲಬಾರದು

ಅಂತ ಇದೆ. ಅವರು ಬಾವಿಯಲ್ಲಿ ಕುಳಿತುಕೊಳ್ಳಬೇಕು ಅಂತ ಇದೆ. ಅಧ್ಯಕ್ಷ ಪೀಠಕ್ಕೂ ಸದಸ್ಯರಿಗೂ ನೇರ ಸಂಪರ್ಕ ಇರಬೇಕು ಮತ್ತು ನಿಮ್ಮನ್ನೇ ಕುರಿತು ಮಾತನಾಡಬೇಕು ಅಂತ ನಿಯಮಾವಳಿಗಳನ್ನು ನಾವು ರಚಿಸಿದ್ದೇವೆ. ಆದರೆ ಎಲ್ಲರೂ ನಿಲ್ಲುತ್ತಾರೆ ಯಾರೂ ಕೂರಲು ತಯಾರಿಲ್ಲ. ಕೂತರೂ ಘೋಷಣೆ ಕೂಗಬಾರದು ಅಂತ ಇದೆ. ಯಾವುದು ನಿಯಮಾವಳಿಗಳ ಪ್ರಕಾರ ನಡೆಯುವುದಿಲ್ಲ ಆಗ ಇಂತಹ ಅನಾರ್ಕಿ, ಅರಾಜಕತೆ ಉಂಟಾಗುವಂಥ ವ್ಯವಸ್ಥೆ ಆಗುತ್ತದೆ. ಈಗಾದರೂ ಅವರು ಸಭಾತ್ಯಾಗ ಮಾಡಿರುವುದು ಒಂದು ಒಳ್ಳೆಯ ಸಂಪ್ರದಾಯವಲ್ಲ. ಅದಕ್ಕೆ ಜೆಎಚ್ ಪಟೇಲರು ಹಿಂದೆ ಹೇಳುತ್ತಿದ್ದರು, ಧರಣಿ ಮಾಡುವುದು ಅಂದ್ರೆ ನೆಲೆ ಹಿಡಿಯುವುದು ಅಂತ ನಮ್ಮಲ್ಲಿ ಕುಸ್ತಿ ಆಡುವಂತಹ ಫೈಲ್ವಾನರು ನೆಲಹಿಡಿಯುತ್ತಾರೆ, ನಿಂತು ಆಡುವುದಿಲ್ಲ, ಪಟ್ಟುಗಳನ್ನು ತೋರಿಸುವುದಿಲ್ಲ. ಅವರು ಯಾವಾಗಲೂ ನೆಲ ಹಿಡಿಯುವುದರಿಂದ ಬೆನ್ನು ಕೆಡವಿ ಅವರನ್ನು ಸೋಲಿಸುವುದು ಕಷ್ಟವಾಗಿ ಬಿಡುತ್ತದೆ. ಆ ನೆಲ ಹಿಡಿಯುವ ಕೆಲಸ ಮಾಡಬಾರದು ಅಂತ ಹಿಂದೆ ಜೆಎಚ್ ಪಟೇಲರು ಬಹಳ ತಮಾಷೆಯಾಗಿ ಹೇಳಿರುವುದು ಇದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಈ ಸಮಯದಲ್ಲಿ ಮುಂದಾದರೂ ಕೂಡ ಸಹಕರಿಸಿದರೆ, ಒಳ್ಳೆಯದು. ಮಾನ್ಯ ಸಿದ್ಧರಾಮಯ್ಯ ಹೇಳಿದರು ಇನ್ನೂ 14 ದಿವಸ ಸಮಯ ಇತ್ತಲ್ಲಾ ಅಂತ; ನಾವು ಬಿಎಸಿಯಲ್ಲಿ ಕಾರ್ಯಕಲಾಪಗಳನ್ನು ನಿರ್ಣಯಿಸುವಾಗ 19ನೇ ತಾರೀಖೇ ಕೊನೆಯದಾಗಿರತಕ್ಕದ್ದು; 19ರೊಳಗೆ ನಮ್ಮೆಲ್ಲಾ ಈ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸತಕ್ಕದ್ದು ಎಂಬ ಅಭಿಪ್ರಾಯಕ್ಕೆ ಬಂದಿದ್ದೆವು. ಅದು ಒಂದು ನಿರ್ಧಾರ ಅದು ಇಡೀ ಸದನದ ಮೇಲೆ ಬಂಧನಕಾರಿ. ಆ ಕಾರಣಕ್ಕೇ ನಾವು 19ರ ಆಚೆ ಹೋಗಲು ಸಾಧ್ಯವಾಗುವುದಿಲ್ಲ. ಮೊದಲಿದ್ದುದ್ದು 14ನೇ ತಾರೀಖುವರೆಗೆ; ಆಮೇಲೆ 17 ಆಯಿತು. ಆದಾದಮೇಲೆ 19 ಆಯಿತು. ಬೇರೆ ಬೇರೆ ಕಾರ್ಯಕ್ರಮಗಳನ್ನು ಶಾಸಕರು, ಮಂತ್ರಿಗಳು ಆಯೋಜಿಸಿರುವ ಸಂದರ್ಭದಲ್ಲಿ 19ನೇ ತಾರೀಖು ಕಡೇ ಗಡುವು ಆಗಿದ್ದರಿಂದ ಅನಿವಾರ್ಯವಾಗಿ ಅವರ ಅಡ್ಡಿ ಆತಂಕಗಳ ನಡುವೆ ಇವು ಮಂಜೂರಾತಿ ಆಗಬೇಕಾಯಿತು. ನಮಗೇನೂ ಅದು ಸಂತೋಷ ತಂದಿದೆ ಅಂತ ನಾವೂ ಭಾವಿಸುವುದಿಲ್ಲ, 45 ಸಾವಿರ ಕೋಟಿ ರೂ.ಗಳ ಆಯವ್ಯಯದಲ್ಲಿ ಆಗಿರುವ ಅನೇಕ ವಿಷಯ ಪ್ರಸ್ತಾಪ ಮಾಡಿದ್ದರೆ ನಮ್ಮ ಸರ್ಕಾರದ ಉದ್ದೇಶವನ್ನು ಆದರೂ ಹೇಳಲು ಆಗುತ್ತಿತ್ತು.

ಅದೇನೇ ಇರಲಿ, ಇದು ಕೆಟ್ಟ ಘಳಿಗೆ, ಈ ಸದನಕ್ಕೆ ಬಹಳ ದೊಡ್ಡ ಘನತೆಯಿದೆ, ಮುಂದಾದರೂ ಅಧಿಕೃತ ವಿರೋಧ ಪಕ್ಷದ ಶಾಸಕ ಮಿತ್ರರು ನಮಗೆ ಸಹಕರಿಸಿ ಕಾರ್ಯಕಲಾಪ ನಡೆಸುವುದಕ್ಕೆ ಅವಕಾಶ ಒದಗಿಸಿಕೊಡುತ್ತಾರೆ; ಅವರು ಧರಣಿಯಿಂದ ಸಭಾತ್ಯಾಗ ಮಾಡಿದವರು ಒಳಗಡೆಗೆ ಬರಲಿ, ಅವರೂ ಕೂಡ ಕ್ರಿಯಾಶೀಲವಾಗಿ ಸದನದ ಚರ್ಚೆಯಲ್ಲಿ ಭಾಗವಹಿಸಲಿ ಅಂತ ಹೇಳಿ ನನ್ನ ನಾಲ್ಕು ಮಾತು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಅಧ್ಯಕ್ಷರೇ, ಸದನ ಸುಸೂತ್ರವಾಗಿ ನಡೆಯಬೇಕು ಎಂಬುದರಲ್ಲಿ ನಾನು ಮೊದಲನೆಯವನು. ಈ ಸದನ ಇರುವುದೇ ಚರ್ಚೆ ಮಾಡುವುದಕ್ಕೆ ಹಾಗೂ ಮಾತನಾಡುವುದಕ್ಕೆ ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಾತಿನ ಮನೆ. ಮಾತಿನ ಮನೆಯಾಗಿಯೇ ಉಳಿಯಬೇಕು ಅದು ಬಿಟ್ಟು ಮುಂದೆ ಹೋಗಬಾರದು. ಆ ಒಂದು ಲಕ್ಷ್ಮಣರೇಖೆ ವಿಚಾರದಲ್ಲಿ ಬಹಳ ಎತ್ತರವಾದ ಚರ್ಚೆಗಳಾಗಬೇಕು. ಹಿಂದೆ ಅಂತಹ ಚರ್ಚೆ ಮಾಡಿರುವುದು ನಾನು ಅನೇಕ ಸಾರಿ ನೋಡಿದ್ದೇನೆ. ಹೆಚ್ಚುಕಡಿಮೆ ದಿನಗಟ್ಟಲೆ ಚರ್ಚೆ ಮಾಡಿದ್ದಾರೆ ಇಲ್ಲಿ ಚನ್ನಬಸಪ್ಪನವರು ಸಿದ್ದವೀರಪ್ಪನವರು ಈ ಸಾಲಿನಲ್ಲಿ ಕೂತು. ಮತ್ತು ಬೇಡಿಕೆಗಳ ಬಗ್ಗೆ 70 ದಿವಸ 90 ದಿವಸ ಚರ್ಚೆ ನಡೆದಿರುವುದೂ ಉಂಟು. ಒಂದೊಂದು ಇಲಾಖೆಯ ಬೇಡಿಕೆಯನ್ನು ಎರಡು ಮೂರು ದಿವಸ ಚರ್ಚೆ ಮಾಡಿರುವುದು ಉಂಟು. ಆದರೆ ಇತ್ತೀಚಿನ ದಿನಗಳಲ್ಲಿ ಶಾಸನಸಭೆಯ ದಿನಗಳೂ ಕಡಿಮೆಯಾಗಿದೆ, ನೂರು ದಿನ ಶಾಸನಸಭೆ ನಡೆಸಬೇಕು ಎಂಬ ಸಿದ್ಧಾಂತಕ್ಕೂ ತಿಲಾಂಜಲಿಯಾಗಿದೆ. ಹಿಂದೆ ಕಾನೂನು ಸಚಿವರಾಗಿದ್ದ ಎಚ್ಕೆ ಪಾಟೀಲರು ಒಂದು ವಿಧೇಯಕ ತಂದಾಗ ನಾವೆಲ್ಲಾ ಮಾಡಿಕೊಟ್ಟಿದ್ದೇವೆ. ಕನಿಷ್ಟ 60 ದಿವಸ ಅದರ ಮೇಲೆ ಅಂತ. ಯಾವ್ಯಾವಾಗ ಕರೆಯಬೇಕು ಅಂತಲೂ ನಿರ್ಧಾರ ಮಾಡಿದ್ದೇವೆ. ಈ ಪರಿಸ್ಥಿತಿ ಇದು ಸಮ್ಮಿಶ್ರ ಸರ್ಕಾರ. ಹಿಂದೆ ಇದ್ದ ಸರ್ಕಾರ 20 ತಿಂಗಳೋ 19 ತಿಂಗಳೋ ಮಾಡಿ ಸರ್ಕಾರ ಹೋಯಿತು. ಮತ್ತೊಂದು ಹೊಸ ಸರ್ಕಾರ. ಹೊಸ ಸರ್ಕಾರ ಬಂದು ಹೊಸ ಸರ್ಕಾರದ ಆಯವ್ಯಯವನ್ನು ಮಾನ್ಯ ಯಡಿಯೂರಪ್ಪನವರು, ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಸಚಿವರಾಗಿ ಆಯವ್ಯಯವನ್ನು ಮಂಡಿಸಿದರು. ಅದು ಸಾಮಾನ್ಯ ಚರ್ಚೆಯಾಯಿತು. ಆದರೆ ಸಮಗ್ರವಾಗಿ ಎಲ್ಲಾ ಬೇಡಿಕೆಗಳ ಬಗ್ಗೆ

ಚರ್ಚೆಯಾಗಬೇಕಾಗಿತ್ತು. ಇದು ಕಾರಣಗಳು ಏನೇ ಕೊಡಲಿ. ಧರಣಿ ಮಾಡುತ್ತಿದ್ದರು, ಅವಕಾಶ ಕೊಡಲಿಲ್ಲ. ನಾವು ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೆವು. ನಾನು ತಯಾರಾಗಿದ್ದೆ. ನೀವು ನನಗೆ ಅವಕಾಶವನ್ನು ಕೊಟ್ಟಿದ್ದರೆ ನಾನು ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ನಾನು ಸಿದ್ಧವಾಗಿದ್ದೆ. ನಾನು ತಯಾರಾಗಿದ್ದೆ. ನಮಗೆ ವಂಚನೆಯಾಗಿದೆ. ನಮಗೆ ಮಾತನಾಡುವುದಕ್ಕೆ ಅವಕಾಶವಿಲ್ಲ. ನಾವು ಏರುಧ್ವನಿಯಲ್ಲಿ ಕೈಗಳನ್ನೆತ್ತಿ ಮಾತನಾಡತಕ್ಕ ಧ್ವನಿಯೂ ನಮಗಿದೆ. ಭಾಷೆಯೂ ನಮಗಿದೆ. ಎಲ್ಲಿ ಉಪಯೋಗಿಸಬೇಕು, ಎಲ್ಲಿ ಮಾಡಬೇಕೆನ್ನತಕ್ಕದ್ದು ನನಗೆ ವಿವೇಚನೆ ಇದೆ. ಅದರ ಬಗ್ಗೆ ನನ್ನದೇನೂ ಇಲ್ಲ. ಆದರೆ ನಾವು ಒಂದು ರೀತಿ ಮೂಕಪ್ರೇಕ್ಷಕರಾಗಿ ಎಂದೂ ಕುಳಿತುಕೊಳ್ಳದೇ ಇರತಕ್ಕ ಪರಿಸ್ಥಿತಿ ನಿರ್ಮಾಣ, ಎಂದೂ ಕುಳಿತುಕೊಳ್ಳದೇ ಇರುವ ಪರಿಸ್ಥಿತಿಯಲ್ಲಿ ನಿರ್ಮಾಣವಾಯಿತು. ಇದು ಮಾನಸಿಕ ಯಾತನೆ ; ಬಹುಶಃ ಇವತ್ತು ಬೆಳಿಗ್ಗೆ ತಮ್ಮನ್ನು ಭೇಟಿ ಮಾಡಿ ಇವತ್ತು ನಾನು ಬಹಿಷ್ಕಾರ ಹಾಕಿ ಹೊರಗಡೆ ಹೋಗುತ್ತೇನೆ ಈ ಪರಿಸ್ತಿತಿ ಎನ್ನುವ ಮನಸ್ಸೂ ಬಂತು. ಆದರೆ ನಾನ್ಯಾಕೆ ನಿಮ್ಮ ಹತ್ತಿರ ಬಂದು ಆ ಮಾತನ್ನು ಹೇಳಬೇಕು ಎನ್ನುವ ಭಾವನೆಯಿಂದಲೇ ನನಗನ್ನಿಸುತ್ತದೆ, ಈ ರೀತಿ 45 ಸಾವಿರ ಕೋಟಿ ರೂಪಾಯಿಗಳ ಈ ಒಂದು ಬೇಡಿಕೆ ಇವತ್ತು ಯಾವುದೂ ಚರ್ಚೆ ಇಲ್ಲದೆ ಹೋದರೆ ನಮಗಲ್ಲ ನಷ್ಟ. ನಷ್ಟ ಆಗಿರತಕ್ಕದ್ದು ರಾಜ್ಯಕ್ಕೆ. ರಾಜ್ಯಕ್ಕೆ ನಷ್ಟ. ಅಧಿಕಾರಿಗಳು ಗಂಭೀರವಾಗಿ ಅವರ ಬಗ್ಗೆ ಟೀಕೆ ಮಾಡುವ ಹಾಗಿಲ್ಲ. ಚರ್ಚೆ ಮಾಡುವ ಹಾಗಿಲ್ಲ. ಇಲಾಖೆ ಬೇಡಿಕೆಗಳ ಮೇಲೆ ಬೆಳಕು ಚೆಲ್ಲುವ ಹಾಗಿಲ್ಲ. ಪತ್ರಿಕೆಗಳಲ್ಲಿ ಹೊರಗೆ ಬರುವ ಹಾಗಿಲ್ಲ. ಎಲ್ಲವನ್ನೂ ಮುಚ್ಚಿ ಇದು ಕತ್ತಲೆಯಾಗಿ ಹೋಯಿತು. ಇವತ್ತು ನನಗನ್ನಿಸುತ್ತದೆ, ಇದೊಂದು ರೀತಿ ಚರ್ಚೆಯಾಗದೇ ಇರತಕ್ಕದ್ದು ನನಗಂತೂ ಒಬ್ಬ ಹಿರಿಯ ಸದಸ್ಯನಾಗಿ ಮಾನಸಿಕವಾಗಿ ಆಗಿರತಕ್ಕ ನೋವು ಮಿಕ್ಕ ರಾಜಕೀಯಕ್ಕೆ ನಾನು ಹೋಗುವುದಿಲ್ಲ. ಇಡೀ ಚರ್ಚೆ ಆಗದೇ ಇರತಕ್ಕದ್ದು. ರಾಜ್ಯದ ಅನೇಕ ಸಮಸ್ಯೆಗಳು, ಪೊಲೀಸ್ ಇಲಾಖೆ, ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್, ವರ್ಗಾವರ್ಗಿ, ಬಡವರದ್ದು, ರೈತರದ್ದು ಅನೇಕ ಸಮಸ್ಯೆಗಳ ಬಗ್ಗೆ ಇಲ್ಲಿ ಬೆಳಕನ್ನು ಚೆಲ್ಲಬೇಕಾಗಿತ್ತು. ಹಳ್ಳಿಗಳು, ಬಹಳ ಜನ ನಿರೀಕ್ಷೆಯನ್ನು ಮಾಡಿದ್ದರು. ಆ ಯಾವ ನಿರೀಕ್ಷಣೆಗೂ ನಾವು ಇಲ್ಲಿ ಜನರಿಗೆ ಸ್ಪಂದಿಸಲಿಲ್ಲ. ಇಲ್ಲಿ ಯಾವುದೇ ವೈಯಕ್ತಿಕವಾದ ಪಕ್ಷಗಳ ಈ ಗೊಂದಲ,

ವೈಯಕ್ತಿಕವಾಗಿ ಇವರದ್ದೇ. ಈ ಸರ್ಕಾರ, ಆ ಸರ್ಕಾರ ಇವರ ವೈಯಕ್ತಿಕವಾದ ಟೀಕೆ ಟಿಪ್ಪಣಿಗಳು, ಮತ್ತು ಪ್ರತಿಷ್ಟೆಗಳು ಮತ್ತು ಒತ್ತಡಗಳು, ಒಬ್ಬರ ಮೇಲೆ ಒಬ್ಬರ ಒತ್ತಡ, ಒಬ್ಬರ ಮೇಲೆ ಒಬ್ಬರು, ಯಾರಿಗೆ ಹೇಳಿದರೆ ಏನು? ಏನು ಪರಿಸ್ಥಿತಿ? ಇದು ಮಾತಿನ ಮನೆಯಲ್ಲಿ ಮುಕ್ತ ಚರ್ಚೆಗೆ ಈ ಸದನ ಇರುವುದು ಮುಕ್ತ ಚರ್ಚೆಗೆ. ಆದರೆ ಇಲ್ಲಿ ಮುಕ್ತ ಚರ್ಚೆ ಮಾಡುವುದಕ್ಕೆ ಅರ್ಥವಿಲ್ಲ. ಯಾರ ಬಗ್ಗೆ ಏನು ಹೇಳಿದರು, ಅದಕ್ಕೊಂದು ದೊಡ್ಡ ಯುದ್ಧ ಇಲ್ಲಿ ಆಗುತ್ತದೆ. ಆದ್ದರಿಂದ ಮುಕ್ತ ಚರ್ಚೆಯನ್ನೂ ಮೂಲೆಗೆ ಹಾಕಿದ್ದೇವೆ. ಪ್ರಜಾತಂತ್ರ ವ್ಯವಸ್ಥೆ ಈ ರೀತಿ ಮುಂದುವರೆದರೆ ಇದು ಬಹಳ ಅತ್ಯಂತ ಅನಾಗರೀಕ ವರ್ತನೆಯಾಗುತ್ತದೆ. ಮತ್ತು ಅರಾಜಕತೆ ಆಗುತ್ತದೆ. ಈ ರಾಜ್ಯದ ಜನತೆಗೆ ನಾವು ಒಂದು ಕಗ್ಗತ್ತಲೆಯಲ್ಲಿ ಇಟ್ಟಂತೆ ಆಗುತ್ತದೆ. ಅದನ್ನು ನಾನು ಬಹಳ ನೋವಿನಿಂದ ಒಬ್ಬ ಹಿರಿಯ ಸದಸ್ಯನಾಗಿ ಚರ್ಚೆ ಇಲ್ಲದೆ ನಾನು ಮಾನ್ಯ ಯಡಿಯೂರಪ್ಪ ನವರನ್ನು ಕೈಮುಗಿದು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ನಿರ್ಧಾರಕ್ಕೆ ನೀವ್ಯಾಕೆ ಬಂದ್ರಿ ಅಂತ? ಇರಬಹುದು. ಇಂಥ ಧರಣಿಗಳು, ಸತ್ಯಾಗ್ರಹಗಳು ಹಿಂದೆ ಅನೇಕ ಬಾರಿ ನಡೆದಿದೆ. ನೀವು ಅದರ ಬಗ್ಗೆ ಕುಳಿತು ಒಂದಲ್ಲ ನಾಲ್ಕು ಸಾರಿ ಮಾತನಾಡಿ ಚರ್ಚೆಗೆ ನೀವು ಅವಕಾಶವನ್ನು ಕೊಡಬೇಕಾಗಿತ್ತು. ಚರ್ಚೆ ಮಾಡದಿದ್ದ ಮೇಲೆ ನಿಮಗೂ ಶೋಭೆ ಬರುವುದಿಲ್ಲ. ನೀವೇನು ಹಣಕಾಸಿನ ಬಗ್ಗೆ ಮಂಡಿಸಿದಿರಿ, ಅವತ್ತೇನು ಇಡೀ ರಾಜ್ಯದ ಪತ್ರಿಕೆಗಳು ವಿವಿಧ ಭಂಗಿಗಳಲ್ಲಿ ಫೋಟೋವನ್ನು ಕೊಟ್ಟು ನಿಮ್ಮನ್ನು ಹೊಗಳಿ ಎಷ್ಟು ಮೇಲಕ್ಕೆ ತಂದರು. ಆದರೆ ಇವತ್ತು ಅದೇ ಚರ್ಚೆ ನೀವೇನು ಮಾಡಿದ್ದೀರಿ, ಏನು ಮಾಡುತ್ತೀರಿ, ಎಲ್ಲಿಗೆ ತಲುಪಿದ್ದೀರಿ, ನಿಮ್ಮ ಹಣಕಾಸನ್ನು ಎಲ್ಲಿ ಕೊಡುತ್ತೀರಿ, ಎಲ್ಲವನ್ನೂ ಚರ್ಚೆ ಮಾಡಬೇಕಲ್ಲಾ. ಯಾವುದೂ ಚರ್ಚೆ ಆಗಲಿಲ್ಲ. ಆದ್ದರಿಂದ ನಿಮಗೂ ಕಳಂಕ ನಿಮಗೇನೂ ಒಳ್ಳೆಯ ಶೋಭೆ ಏನೂ ಅಲ್ಲ. ಉಪ ಮುಖ್ಯಮಂತ್ರಿಯಾಗಿರಬಹುದು. ಇನ್ನೂ 15 ತಿಂಗಳು ಇರಬಹುದು. ಮುಂದೆ ನೀವು ಮುಖ್ಯಮಂತ್ರಿಯಾಗಬಹುದು. ನಿಮ್ಮ ಸರ್ಕಾರವೇ ಇರಬಹುದು. ಆದರೆ ಶೋಭೆ ಅಲ್ಲ. ಈ ಸದನಕ್ಕೆ ಶೋಭೆ ಅಲ್ಲ. ರಾಜ್ಯಕ್ಕೆ ಶೋಭೆ ಅಲ್ಲ. ಬಹಳ ಅತ್ಯಂತ ನೋವಿನಿಂದ ನಿಮ್ಮ ರಾಜಕಾರಣಕ್ಕೆ ತಿಲಾಂಜಲಿಯನ್ನು ಇಟ್ಟುಕೊಳ್ಳಿ. ಬಹಳ ನೋವಿನಿಂದ ಈ ಸದನದ ಹಿರಿಯ ಸದಸ್ಯನಾಗಿ ಬಹಳ ನೋವಿನಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಬಹಳ

ನೋವಿನಿಂದ. ಚರ್ಚೆ ಆಗಲಿಲ್ಲ. ಎಷ್ಟು ನೋವು, ಹೃದಯವೇದನೆಯಾಗುತ್ತಿದೆ. ಇದು ಇಂಥ ಪರಿಸ್ಥಿತಿ ಎಂದೂ ಬರಬಾರದಾಗಿತ್ತು. ಈ ಸದನ ತಬ್ಬಲಿ ಆಯಿತು. ಈ ಸದನಕ್ಕೆ ಮತ್ತು ಅಧ್ಯಕ್ಷರಿಗೆ ಎರಡು ಕೈಜೋಡಿಸಿ ಮುಗಿದು ಈ ಪರಿಸ್ಥಿತಿ ಆಗಬಾರದಾಗಿತ್ತು ಎಂದು ಹೇಳಿ ನಾನು ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಅಧ್ಯಕ್ಷರಾದ ವಾಟಾಳ್ ನಾಗರಾಜ್‌ರವರು ಈ ಹಂತದಲ್ಲಿ ಸಭಾತ್ಯಾಗ ಮಾಡಿ ಹೊರನಡೆದರು)

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ನೋವಿನಿಂದ ನಾವು ಮೂಕಪ್ರೇಕ್ಷಕರಾಗಿ ಕುಳಿತಿದ್ದೆವು ಎಂದು ಹೇಳಿದರು. ಪ್ರಾಯಶಃ ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಕೃಪಾಚಾರ್ಯ ಮತ್ತು ದ್ರೋಣಾಚಾರ್ಯರು ಇದ್ದಂತೆ ಅವರು ಮೌನವಾಗಿ ಕುಳಿತಿದ್ದರು. ಅವತ್ತು ಬಹುಶಃ ನಿಮಗೆ ಆ ನೋವು ಕಂಡಿದೆ ಎಂದು ನನಗೆ ಗೊತ್ತಾಗಿದೆ. ಏಕೆಂದರೆ ನೀವು ಮೌನವಾಗಿ ಕೂಡುವವರಲ್ಲ. ಆದರೆ ದ್ರೌಪದಿಯ ವಸ್ತ್ರಾಪಹರಣದಲ್ಲಿ ದ್ರೋಣಾಚಾರ್ಯರು ಮತ್ತು ಕೃಪಾಚಾರ್ಯರು ಹೇಗೆ ಮೌನವಾಗಿದ್ದರೋ ಹಾಗೆ ತಾವು ಮೌನವಾಗಿದ್ದಿರಿ ಎಂದು ನಾನು ಭಾವಿಸಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್: ನಾನು ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಾಗಿಲ್ಲ. ಅಂಥ ದ್ರೌಪದಿಯೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಈಗ ನಮ್ಮ ನಿಯಮಾವಳಿಗಳು ಮತ್ತು ನಮ್ಮ ಸದನದ ಘನತೆ..

ಶ್ರೀ ವಾಟಾಳ್ ನಾಗರಾಜ್: ಸೀತೆಯನ್ನು ಮಾಡುತ್ತೀರಿ, ದ್ರೌಪದಿಯನ್ನೂ ಮಾಡುತ್ತೀರಿ, ರುಕ್ಮಿಣಿಯನ್ನೂ ಮಾಡುತ್ತೀರಿ, ಇಲ್ಲಿ ದ್ರೌಪದಿ ಎನ್ನುವುದು ಇಲ್ಲವೇ ಇಲ್ಲ. ಮಹಾಭಾರತ ಇಲ್ಲವೇ ಇಲ್ಲ. ಎಲ್ಲಾ ಬರೀ ಕೀಚಕನವಧೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮೌನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್‌ರವರು ಕಡೆಯಲ್ಲಿ ಒಂದು ಮಾತನ್ನು ಹೇಳಿದರು. ದ್ರೌಪದಿಯ ವಸ್ತ್ರಾಹರಣದ ಸಂದರ್ಭದಲ್ಲಿ ಯಾರ್ಯಾರಲ್ಲ ಮೌನವಾಗಿದ್ದರು ಎಂದು ಹೆಸರು ಹೇಳಿ ಹೇಳಿದರು. ನಾವು ಮೌನವಾಗೇ ಇದ್ದುದು.

ಶ್ರೀ ಎಂ.ಪಿ. ಪ್ರಕಾಶ್: ಅದನ್ನು ಅವರಿಗೆ ಮಾತ್ರ ಹೇಳಿದ್ದೇನೆ. ಅದು ನಿಮಗಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಯಾರನ್ನು ಕುರಿತು ಹೇಳುತ್ತಿಲ್ಲ. ದಯವಿಟ್ಟು ಕೇಳಿ. ನಾನು ಕೇಳಿದ ಮೇಲೆ ಬೇಕಾದರೆ ತಾವು ಹೇಳಿ. ಈಗ ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮೌನವಾಗಿದ್ದರು ಎಂದು ಹೇಳಿದಿರಿ. ನಾವೂ ಮೌನವಾಗಿದ್ದವರೇ. ದ್ರೌಪದಿ ವಸ್ತ್ರಾಪಹರಣದಲ್ಲಿ ಯಾರು ಮೌನವಾಗಿದ್ದರು ಎಂದು ಹೇಳಿದರೆ ಮಾತನಾಡದೆ ಎರಡು ಕ್ಯಾಟಿಗೂರಿ ಜನ ಅಲ್ಲಿ. ಒಬ್ಬರು ಅಸಹಾಯಕತೆಯಿಂದ ಮೌನವಾಗಿದ್ದರು. ಇನ್ನೊಂದು ಗುಂಪು ಈ ದ್ರೌಪದಿಯ ವಸ್ತ್ರಾಪಹರಣಕ್ಕೆ ಕಾರಣರ್ಯಾರೋ ಅವರಿಗೆ ಶಾಮೀಲಾಗಿದ್ದರು.

ಶ್ರೀ ಎಂ.ಪಿ. ಪ್ರಕಾಶ್: ಅವರು ಅಸಹಾಯಕರಾಗಿರಲಿಲ್ಲ. ಉಪ್ಪುಂಡ ಕಾರಣಕ್ಕಾಗಿಯೇ ನಾವು ಮೌನವಾಗಿದ್ದೇವೆಂದು ಹೇಳುತ್ತಾರೆ. ನೀವ್ಯಾರೂ ಉಪ್ಪುಂಡಿಲ್ಲ. ಆದ್ದರಿಂದ ನೀವ್ಯಾಕೆ ಮೌನವಾಗಿರುತ್ತೀರಿ ಎಂದು ನನ್ನ ಪ್ರಶ್ನೆ. ಆದರೆ ಪ್ರಶ್ನೆ ಬಂದಿರತಕ್ಕದ್ದು ಇಷ್ಟೆ. ಅವರು ಹೇಳಿದರು, ಅವರಿಗಾಗಿಯೇ ಈ ವಿಚಾರವನ್ನು ಹೇಳಿದ್ದೇನೆಯೇ ವಿನಹಾ ತಮಗಾಗಿ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ನಾನು ಪೂರ್ತಿ ಹೇಳಲಿಲ್ಲ. ಇಲ್ಲಿ ಕೇಳಿ. ಅವತ್ತು ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಅಸಹಾಯಕರಾಗಿದ್ದವರು ಬೇರೆ. ಮೌನವಾಗಿದ್ದವರು ಬೇರೆ. ಮೌನವಾಗಿದ್ದ ಎಲ್ಲರೂ ಕೂಡ ಅವತ್ತು ಕೌರವರಿಗೆ ಶಾಮೀಲಾಗಿದ್ದರು, ಉಪ್ಪುಂಡಿದ್ದರು. ಅದಕ್ಕೋಸ್ಕರ ಅವರು ಮೌನವಾಗಿ ಕೂಡಬೇಕಾಯಿತು ತಪ್ಪು ಎಂದು ಗೊತ್ತಿದ್ದರೂ ಕೂಡ. ಆದರೆ ನಾವ್ಯಾರೂ ಇಲ್ಲಿ ಯಾರ ಉಪ್ಪೂ ಉಂಡಿಲ್ಲ. ನಾನಾಗಲಿ, ಮಾಧುಸ್ವಾಮಿಯಾಗಲಿ, ಜಯಪ್ರಕಾಶ್ ಹೆಗ್ಡೆಯವರಾಗಲಿ, ವಾಟಾಳ್ ಆಗಲಿ, ಇವರಾಗಲಿ ನಾವು ಯಾರೂ ಉಪ್ಪುಂಡುವರಲ್ಲ. ಆದರೆ ಜನತೆಯಿಂದ ಆಯ್ಕೆಯಾದ ನಮಗೆ ಆದಂಥ ನೋವು ನಾಲ್ಕು ದಿವಸದಿಂದ, ನಾನಂತೂ ಸ್ವಂತವಾಗಿ ಅಭಿಪ್ರಾಯ ಇಲ್ಲಿ ನನಗೆ ಬಂದಿದೆ. ಏನೆಂದರೆ ಕರ್ನಾಟಕ ರಾಜ್ಯದ, ಐದು ಕೋಟಿ ನಲವತ್ತು ಲಕ್ಷದ ಜನರ ಮುಂದೆ ನಾನೊಬ್ಬ ಅಪರಾಧಿಯಾಗಿ ನಿಂತಿದ್ದೇನೆ. ಏಕೆಂದರೆ ಆ ಜನ ನಮ್ಮನ್ನು ಏತಕ್ಕೋಸ್ಕರ ಇಲ್ಲಿಗೆ ಆರಿಸಿ ಕಳುಹಿಸಿದರೋ ಯಾವ ಕೆಲಸ ಮಾಡಬೇಕು ಎಂದು ಹೇಳಿ ನಮ್ಮನ್ನು ಇಲ್ಲಿಗೆ ಕಳುಹಿಸಿದರೋ ಆ ಕೆಲಸವನ್ನು ಮಾಡದೆ ಸರಾಸರಿ ಒಂದು ತಿಂಗಳ ಕಾಲ ಸಾರ್ವಜನಿಕ ಹಣವನ್ನು ಪೋಲು ಮಾಡಿ ಸಾರ್ವಜನಿಕ ಸಮಯವನ್ನು

ಪೋಲು ಮಾಡಿ, ನಮ್ಮ ಸಮಯವನ್ನು ಪೋಲು ಮಾಡಿಕೊಂಡು ಸಾರ್ವಜನಿಕ ಬೊಕ್ಕಸಕ್ಕೆ ನಷ್ಟ ಮಾಡಿ ನಾವು ಇವತ್ತು ಟಿಎ ಡಿಎ ಯನ್ನು ತೆಗೆದುಕೊಂಡು ಹೋಗತಕ್ಕ ಹೀನ ಸ್ಥಿತಿಗೆ ಬಂದಿದ್ದೇವೆ ಎನ್ನತಕ್ಕ ನೋವು ನನಗಂತೂ ಆಗಿದೆ. ಆ ದೃಷ್ಟಿಯಲ್ಲಿ ನಾನು ಈ ದಿವಸ ನಾನು ವೈಯಕ್ತಿಕವಾಗಿ, ಬೇರೆಯವರ ಕತೆ ನನಗೆ ಗೊತ್ತಿಲ್ಲ. ನಾನೊಬ್ಬ ಅಪರಾಧಿಕಾಗಿ ಇಲ್ಲಿ ನಿಂತಿದ್ದೇನೆ. 45 ಸಾವಿರ ಕೋಟಿ ರೂಪಾಯಿಗಳ ಆಯವ್ಯಯವನ್ನು ಒಂದೇ ಒಂದು ಅಕ್ಷರ ಇಲ್ಲದೇ, ಚರ್ಚೆ ಇಲ್ಲದ ಇವತ್ತು ಸರ್ಕಾರ ಇದನ್ನು ಅನುಮೋದನೆ ತೆಗೆದುಕೊಂಡಿದೆ ಎಂದು ಹೇಳಿದರೆ ಇದಕ್ಕಿಂತ ಪ್ರಜಾಪ್ರಭುತ್ವಕ್ಕೆ ಆಗಬೇಕಾಗಿರತಕ್ಕ ಅವಮಾನ ದ್ರೋಹ ಬೇರೆ ಏನೂ ಇರಲಿಕ್ಕೆ ಸಾಧ್ಯವಿಲ್ಲ. ಮತ್ತೆ ನಾವು ಈ ಸದನ ಈ ಕೆಲಸಕ್ಕೋಸ್ಕರ ಇಷ್ಟು ದಿವಸ ನಡೆಸಬೇಕಾದಂಥ ಅವಶ್ಯಕತೆ ಇರಲಿಲ್ಲ. ಯಾವ ಕಾರಣಕ್ಕೂ ಇದನ್ನು ನಡೆಸಬೇಕಾದಂಥ ಅವಶ್ಯಕತೆ ಇರಲಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ಹಲವಾರು ಜ್ವಲಂತ ಸಮಸ್ಯೆಗಳು ಜನರನ್ನು ಕಾಡುತ್ತಿವೆ. ಒಂದು ಕಡೆ ಅತಿವೃಷ್ಟಿ ಒಂದು ಕಡೆ ಅನಾವೃಷ್ಟಿ, ಬೆಲೆ ಏರಿಕೆ, ಡೀಸಲ್ ಏರಿಕೆ, ಪೆಟ್ರೋಲ್ ಏರಿಕೆ, ಜನರಿಗೆ ಇವತ್ತು ರೇಷನ್ ಕಾರ್ಡ್ ಇಲ್ಲ. ಸೀಮೆಎಣ್ಣೆ ಇಲ್ಲ. ಹಳ್ಳಿಗಾಡಿನಲ್ಲಿ ಕುಡಿಯಲಿಕ್ಕೆ ನೀರಿಲ್ಲ ಕೆಲವು ಸಂದರ್ಭಗಳಲ್ಲಿ ಈಗಲೂ ಕೂಡ. ಜನ ಒದ್ದಾಟ ಮಾಡುತ್ತಿದ್ದಾರೆ. ಯಾರು ಒದ್ದಾಟ ಮಾಡುತ್ತಿರುವವರು? ನಮ್ಮನ್ನು ವೋಟು ಹಾಕಿ ಇಲ್ಲಿಗೆ ಕಳುಹಿಸಿರುವ ಜನ. ಆದರೆ ನಾವೇನು ಮಾಡಿದ್ದೇವೆ, ಇವತ್ತು ಸರ್ಕಾರದ ಘೋಷಣೆಗಳು ನಾಲ್ಕು ತಿಂಗಳ ಹಿಂದೆ ಇವರೇನು ಕೊಟ್ಟರು ಜಾರಿ ಮಾಡುತ್ತೇವೆಂದು ಹೇಳಿ. ಅದು ಯಾವ ಯಾವ ರೀತಿ ಜಾರಿಯಾಗಿದೆ, ಎಲ್ಲೆಲ್ಲಿ ಜಾರಿಯಾಗಿಲ್ಲ. ಯಾವ ಕಾರಣಕ್ಕೋಸ್ಕರ ಜಾರಿಯಾಗಲಿಲ್ಲ? ಇದರಿಂದ ಸಾಮಾನ್ಯ ಜನರಿಗೆ ಆಗಿರತಕ್ಕ ತೊಂದರೆ ಏನು? ಈ ರಾಜ್ಯಕ್ಕೆ ಆಗಿರತಕ್ಕಂಥ ತೊಂದರೆ ಏನು ಎನ್ನತಕ್ಕದ್ದನ್ನು ಚರ್ಚೆ ಮಾಡತಕ್ಕಂಥ, ಅಧಿಕಾರ ಇರತಕ್ಕಂಥ ಸದನ ಇದು. ಚರ್ಚೆ ಮಾಡುವುದಕ್ಕೋಸ್ಕರವೇ ಇಲ್ಲಿಗೆ ಜನ ನಮ್ಮನ್ನು ಕಳುಹಿಸಿರುವುದು. ಆದರೆ ಅದನ್ನು ನಾವು ಸಂಪೂರ್ಣವಾಗಿ ಮರೆತಿದ್ದೇವೆ. ಆ ಕೆಲಸವನ್ನೇ ನಾವು ಮಾಡಲೇ ಇಲ್ಲ. ಜನರ ನೋವಿಗೆ ಸ್ಪಂದಿಸಲಿಲ್ಲ. ಕರ್ನಾಟಕ ರಾಜ್ಯದ ಅವಶ್ಯಕತೆಗಳಿಗೆ ಸ್ಪಂದಿಸಲಿಲ್ಲ. ಕರ್ನಾಟಕ ರಾಜ್ಯದ ಸಮಸ್ಯೆಗಳ ಬಗ್ಗೆ ನಾವು ಮಾತನಾಡಲಿಲ್ಲ. ಕರ್ನಾಟಕ ರಾಜ್ಯದ ಜನರ ಬಗ್ಗೆ ನಾವು ಇವತ್ತು

ಮಾತನಾಡಲಿಲ್ಲ. ಏಕೆ ಇರಬೇಕು ಈ ಸದನ? ಏತಕ್ಕೋಸ್ಕರ ಈ ಸದನ ಇರಬೇಕು? ಈ ಸದನಕ್ಕೆ ತನ್ನದೇ ಆದಂತಹ ಕೆಲವು ನಿಯಮಾವಳಿಗಳು ಇವೆ. ತನ್ನದೇ ಆದಂತಹ ಕೆಲವು ನೀತಿಗಳು ಇವೆ. ಯಾರೂ ಈ ಸದನವನ್ನು ರ್ಯಾನ್‌ಸಂ ಮಾಡುವುದಕ್ಕೆ ಆಗುವುದಿಲ್ಲ. ಅದರೆ ಇದು ಪ್ರಜಾಪ್ರಭುತ್ವ ಪ್ರತಿ ಒಬ್ಬರಿಗೂ ಪ್ರತಿಭಟನೆ ಮಾಡತಕ್ಕಂಥ ಹಕ್ಕು ಇದೆ. ಸರ್ಕಾರದ ಧೋರಣೆಗಳನ್ನು ವಿರೋಧ ಮಾಡತಕ್ಕಂಥ ಹಕ್ಕು ಇದೆ. ಸರ್ಕಾರದ ಧೋರಣೆಗಳ ವಿರುದ್ಧ ಪ್ರತಿಭಟನೆ ಮಾಡತಕ್ಕಂಥ ಹಕ್ಕು ಇದೆ. ಸದನಕ್ಕೆ ಬಹಿಷ್ಕಾರ ಮಾಡತಕ್ಕಂಥ ಹಕ್ಕು ಇದೆ. ಧರಣಿ ಮಾಡತಕ್ಕಂಥ ಹಕ್ಕು ಇದೆ. ಆದರೆ ಇವೆಲ್ಲವೂ ಕೂಡ ಒಂದು ಮಿತಿಯೊಳಗಡೇನೇ ಆಗಬೇಕು. ಇದು ಪ್ರಜಾಪ್ರಭುತ್ವದ ನಿಯಮ. ಆ ಮಿತಿಯನ್ನು ಮೀರಿ ಹೋದಾಗ ಇದು ಪ್ರಜಾಪ್ರಭುತ್ವ ತನ್ನ ಅರ್ಥವನ್ನು ಕಳೆದುಕೊಂಡು ಫ್ಯಾಸಿಸ್ಟ್ ಧೋರಣೆಗೆ ಎಡೆ ಮಾಡಿಕೊಡುತ್ತದೆ. ಅದೇ ನಾವು ಇವತ್ತು ಮಾಡಿರತಕ್ಕಂಥ ಕೆಲಸ. ಪ್ರಜಾಪ್ರಭುತ್ವದಲ್ಲಿ ಯಾರೂ ಕೂಡ ನನ್ನ ಮಾತೇ ಗೆಲ್ಲಬೇಕು. ನನ್ನ ಮಾತೇ ನಡೆಯಬೇಕು ಎಂದು ಹೇಳಿ ಆಳುವ ಪಕ್ಷದವರಾಗಲೀ, ವಿರೋಧ ಪಕ್ಷದವರಾಗಲೀ, ಯಾರೂ ಕೂಡ ಹಠ ಹಿಡಿಯತಕ್ಕಂಥದ್ದು ಫ್ಯಾಸಿಸ್ಟ್ ಮನೋಭಾವ. ನಮ್ಮ ಅಭಿಪ್ರಾಯ ನಮಗೆ ಹೇಳಲಿಕ್ಕೆ ಹಕ್ಕು ಇದೆ. ಪ್ರತಿಭಟನೆ ಮಾಡಲಿಕ್ಕೆ ಹಕ್ಕು ಇದೆ. ವಿರೋಧ ಮಾಡಲಿಕ್ಕೆ ಹಕ್ಕು ಇದೆ. ಸದನವನ್ನು ಬಹಿಷ್ಕಾರ ಮಾಡಲಿಕ್ಕೆ ಹಕ್ಕು ಇದೆ. ಅಂದರೆ ಸದನವನ್ನು ನಡೆಯದ ಹಾಗೆ ಮಾಡತಕ್ಕಂಥ ಹಕ್ಕು ಆಳುವ ಪಕ್ಷಕ್ಕೂ ಇಲ್ಲಿ ವಿರೋಧ ಪಕ್ಷಕ್ಕೂ ಇಲ್ಲ. ಅಂದರೆ ನಾವೆಲ್ಲರೂ ಇಲ್ಲಿ ಕುಳಿತಿರತಕ್ಕಂಥದ್ದು ನಮ್ಮ ನಮ್ಮ ತೀರ್ಮಾನಗಳಿಂದ ಕುಳಿತಿಲ್ಲ. ನಾನು ಎಂಎಲ್‌ಎ ಆಗಬೇಕೆಂದು ಇಲ್ಲಿ ತೀರ್ಮಾನ ಮಾಡಿಕೊಂಡು ಬಂದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಆಗಬೇಕೆಂದು ಶ್ರೀ ಯಡಿಯೂರಪ್ಪನವರು ತೀರ್ಮಾನ ಮಾಡಿಕೊಂಡು ಈ ಸದನಕ್ಕೆ ಆಯ್ಕೆ ಆಗಲಿಲ್ಲ. ಜನರ ಅಭಿಪ್ರಾಯದಂತೆ ನಾವು ಇಲ್ಲಿ ಆಯ್ಕೆ ಆಗಿ ಬಂದಿರುವುದು. ನಮ್ಮ ತೀರ್ಮಾನದಂತೆ ನಾವು ಬಂದಿಲ್ಲ. ಜನರ ತೀರ್ಪಿನಿಂದ ನಾವು ಇಲ್ಲಿಗೆ ಬಂದಿರತಕ್ಕದ್ದು. ಆದರೆ ಆ ತೀರ್ಪಿಗೆ ನಾವು ಕೊಡುತ್ತಿರತಕ್ಕಂಥ ಬೆಲೆ ಏನು? ಜನತೆ ಇವತ್ತು ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇಟ್ಟಿದ್ದಾರೆ. ನಮ್ಮನ್ನು ಪ್ರಜಾಪ್ರಭುತ್ವದ ರಕ್ಷಕರು, ನೀವು ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿ, ನಮ್ಮ ಪರವಾಗಿ ನೀವು ಸದನಕ್ಕೆ ಹೋಗಿ, ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿ. ನಮ್ಮ

ಪ್ರಜಾಪ್ರಭುತ್ವವನ್ನು ಉಳಿಸಿ ಎಂದು ಹೇಳಿ ಅವರು ವಾರಸುದಾರರಾಗಿ ಇಲ್ಲಿಗೆ ನಮ್ಮನ್ನು ಕಳುಹಿಸಿರತಕ್ಕದ್ದು. ಪ್ರಜಾಪ್ರಭುತ್ವಕ್ಕೆ ಸಾಮಾನ್ಯ ಜನರ ಹಕ್ಕುಗಳನ್ನು ರಕ್ಷಣೆ ಮಾಡಲಿಕ್ಕೆ ಅವರು ವಾರಸುದಾರರಾಗಿ ನಮ್ಮನ್ನು ಇಲ್ಲಿಗೆ ಕಳುಹಿಸಿರತಕ್ಕದ್ದು. ಆದರೆ ನಾವು ಯಾರ ಹಕ್ಕುಗಳನ್ನು ಇಲ್ಲಿ ರಕ್ಷಣೆ ಮಾಡುತ್ತಿರ ತಕ್ಕಂಥದ್ದು? ಯಾರಿಗೋಸ್ಕರ ಈ ಸದನವನ್ನು ನಡೆಸುತ್ತಿದ್ದೇವೇ? ಯಾರ ಹಕ್ಕುಗಳನ್ನು ನಾವಿಲ್ಲಿ ರಕ್ಷಣೆ ಮಾಡುತ್ತಿದ್ದೇವೆ? ಯಾರ ಹಕ್ಕಗಳಿಗೋಸ್ಕರ ನಾವು ಇವತ್ತು ಹೋರಾಟ ಮಾಡುತ್ತಿದ್ದೇವೆ? ಯಾವುದಕ್ಕೋಸ್ಕರ ನಾವು ಹೋರಾಟ ನಡೆಸುತ್ತಿದ್ದೇವೆ? ಹೋರಾಟದ ದಿಕ್ಕು ಇವತ್ತು ಯಾವ ಕಡೆಗೆ ಹೋಗಿದೆ? ಮಾನ್ಯ ಅಧ್ಯಕ್ಷರೆ, ಇದಕ್ಕೆಲ್ಲಾ ನಾವು ಕರ್ನಾಟಕ ಜನತೆಗೆ ಉತ್ತರವನ್ನು ಕೊಡಬೇಕಾಗುತ್ತದೆ. ಇವತ್ತಲ್ಲ ನಾಳೆ ಈ ಸದನದ ಎಲ್ಲಾ ಸದಸ್ಯರು, ನಾವು ಈ ಜನತೆಗೆ ಉತ್ತರ ಕೊಡಬೇಕಾಗುತ್ತದೆ. ನಮ್ಮ ನಮ್ಮ ರಾಜಕೀಯಗಳಿಗೋಸ್ಕರ, ನಮ್ಮ ನಮ್ಮ ಸಿದ್ಧಾಂತಗಳಿಗೋಸ್ಕರ ಜನರ ಹಿತವನ್ನು ಬಲಿ ಕೊಡತಕ್ಕಂಥದ್ದು ಪ್ರಜಾಪ್ರಭುತ್ವದ ನಿಯಮ ಅಲ್ಲ. ಇದು ಫ್ಯಾಸಿಸ್ಟ್ ಧೋರಣೆ. ಇವತ್ತು 45 ಸಾವಿರ ಕೋಟಿ ರೂ. ಅನುದಾನ ಚರ್ಚೆ ಆಗದೇ ಹೋಯಿತು. ಮಾನ್ಯ ಯಡಿಯೂರಪ್ಪನವರನ್ನು ನಾನು ಕೇಳುತ್ತೇನೆ. ಅವರಿಗೆ ಒಂದು ಅವಕಾಶ ಇತ್ತು. ಹೊಸದಾಗಿ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಆಯವ್ಯಯವನ್ನು ಮಂಡಿಸಿದ್ದಾರೆ. ಕ್ರಾಂತಿಕಾರಿ ಬಜೆಟ್ ಅನ್ನು ಮಂಡಿಸಿದ್ದೇವೆ ಎಂದು ಹೇಳಿ ಅವರೇ ರಾಜ್ಯದ ಉದ್ದಗಲಕ್ಕೂ ಪ್ರಚಾರ ನಡೆಸಿದರು. ಆ ಕ್ರಾಂತಿಕಾರಿ ಬಜೆಟ್ ಏನು? ಅದರ ನಿಜ ಸ್ವರೂಪ ಏನು? ಅದರಿಂದ ಯಾರಿಗೆ ಪ್ರಯೋಜನ ಆಗುತ್ತದೆ? ಯಾರಿಗೆ ನಷ್ಟ ಆಗುತ್ತದೆ? ಯಾರಿಗೆ ಲಾಭ ಆಗುತ್ತದೆ ಎನ್ನತಕ್ಕದ್ದನ್ನು ಚರ್ಚೆಯ ಮುಖಾಂತರ ಅವರ ಅವಗಾಹನೆಗೆ ತರಬೇಕಾಗಿತ್ತು. ಮಾನ್ಯ ಹಣಕಾಸಿನ ಮಂತ್ರಿಗಳು ಎಜ್ಯುಕೇಟ್ ಆಗಬೇಕಾಗಿತ್ತು. ಜೊತೆಗೆ ಜೀವನದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಒಂದು ಅತ್ಯಮೂಲ್ಯವಾದ ಅವಕಾಶವನ್ನು ಅವರು ಕಳೆದುಕೊಂಡಿದ್ದಾರೆ. ಅದೇನು ಅಂದರೆ ಆಯವ್ಯಯದ ಮೇಲೆ ಚರ್ಚೆ ನಡೆದರೆ ಅದಕ್ಕೆ ಉತ್ತರ ಕೊಡತಕ್ಕಂಥ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಅದು ಕೇವಲ ಹಣಕಾಸಿನ ಮಂತ್ರಿಗೆ ಮಾತ್ರ ಸಿಗತಕ್ಕಂಥದ್ದು. ರಾಜ್ಯದ ಐದೂವರೆ ಕೋಟಿ ಜನರ ಭವಿಷ್ಯವನ್ನು ರೂಪಿಸತಕ್ಕಂಥ ಆ ಹಣಕಾಸು ವ್ಯವಸ್ಥೆಯ ಬಗ್ಗೆ

ಅಧಿಕಾರಯುತವಾಗಿ ಮಾತನಾಡತಕ್ಕಂಥ ಅಧಿಕಾರ ಇರತಕ್ಕಂಥದ್ದು ಹಣಕಾಸಿನ ಮಂತ್ರಿಗೆ ಐದೂವರೆ ಕೋಟಿ ಜನರ ಭವಿಷ್ಯವನ್ನು ರೂಪಿಸಲಿಕ್ಕೆ ಯೋಜನೆ ಹಾಕಿರತಕ್ಕಂಥದ್ದು. ಅಂತಹ ಚರ್ಚೆಯಲ್ಲಿ ಬಂದಂತಹ ಎಲ್ಲಾ ಉತ್ತಮವಾದಂತಹ ಸಲಹೆಗಳನ್ನು ತೆಗೆದುಕೊಂಡು ಈ ರಾಜ್ಯದ ಜನತೆಗೆ ಅನುಕೂಲ ಆಗತಕ್ಕ ರೀತಿಯಲ್ಲಿ ಉತ್ತರ ಕೊಡತಕ್ಕಂಥ ಒಂದು ಅತ್ಯಮೂಲ್ಯವಾದಂತಹ ಅವಕಾಶವನ್ನು ಅವರು ಕಳೆದುಕೊಂಡಿದ್ದಾರೆ. ಇದು ಪದೇ ಪದೇ ಸಿಗುವುದಿಲ್ಲ. ಶಾಸನಸಭೆ ನಡೆಯುತ್ತದೆ. ಮತ್ತೆ ನವೆಂಬರ್‌ನಲ್ಲಿ ನಾವು ಸೇರುತ್ತೇವೆ. ಏನೇನೋ ಚರ್ಚೆ ಆಗುತ್ತದೆ. ಆದರೆ ಆಯವ್ಯಯದ ಮೇಲೆ ಉತ್ತರ ಕೊಡತಕ್ಕಂಥ, ಪವಿತ್ರವಾದಂತಹ ಅಮೂಲ್ಯವಾದಂತಹ ಅವಕಾಶ ಮತ್ತೆ ಅವರಿಗೆ ಸಿಗುವುದಿಲ್ಲ. ಅವರಾದರೂ ಆಲೋಚನೆ ಮಾಡಬೇಕಾಗಿತ್ತು. ಇದು ಪ್ರಜಾಪ್ರಭುತ್ವ, ಪ್ರತಿಭಟನೆ, ಧರಣಿ ಇವೆಲ್ಲಾ ನಡೆಯತಕ್ಕದ್ದು ಸಹಜ. ಇನ್ನೂ ಈ ತಿಂಗಳು 30ರವರೆಗೆ ಸಮಯಾವಕಾಶ ಇತ್ತು. ಅದನ್ನು ಉಪಯೋಗಿಸಿ ಕೊಳ್ಳೋಣ. ಆದಷ್ಟು ಪ್ರಯತ್ನ ಮಾಡೋಣ ಎನ್ನತಕ್ಕಂಥ ತಾಳ್ಮೆಯನ್ನು ಅವರು ತೋರಿಸಬೇಕಾಗಿತ್ತು. ಏಕೆಂದರೆ ಚೊಚ್ಚಲು ಬಜೆಟ್ ಅನ್ನು ಮಂಡಿಸಿದಂತಹ ಮಾನ್ಯ ಹಣಕಾಸಿನ ಸಚಿವರು ಅರು. ಅದೇ ರೀತಿಯಲ್ಲಿ ನಮಗೂ ಜವಾಬ್ದಾರಿ ಇತ್ತು. ನಾವು ವಿರೋಧ ಪಕ್ಷದಲ್ಲಿ ಕುಳಿತಿರುವವರಿಗೂ ಕೂಡ ಜವಾಬ್ದಾರಿ ಇತ್ತು. ನಮಗೆ ಜನ ವಿರೋಧ ಪಕ್ಷದಲ್ಲಿದ್ದು ಪರಿಣಾಮಕಾರಿಯಾಗಿ ಕೆಲಸ ಮಾಡಿ. ಸರ್ಕಾರದ ಎಲ್ಲಾ ಲೋಪದೋಷಗಳನ್ನು, ಆಡಳಿತ ಯಂತ್ರಾಲಯದಲ್ಲಿ ಇರತಕ್ಕಂಥ ಎಲ್ಲಾ ಲೋಪದೋಷಗಳನ್ನು ಭ್ರಷ್ಟಾಚಾರಗಳನ್ನು ಬಯಲಿಗೆ ಎಳೆದು ಜನತೆಯ ಮುಂದೆ ಇಡತಕ್ಕಂಥ ಅಮೂಲ್ಯವಾದಂತಹ ಕೆಲಸ ನಾವು ಮಾಡಬೇಕಾಗಿತ್ತು. ಅದು ನಮ್ಮ ಕರ್ತವ್ಯ ಆಗಿತ್ತು. ನಾವೂ ಕೂಡ ಅದರಲ್ಲಿ ವಿಫಲರಾಗಿದ್ದೇವೆ. ಇದರಲ್ಲಿ ಯಾರಿಗೆ ಬೆನಿಫಿಟ್ ಆಯಿತು? ಯಾರು ಪ್ರಯೋಜನ ಪಡೆದರು? ಯಾರಿಗೆ ಲಾಭ ಆಯಿತು? ಯಾರಿಗೆ ನಷ್ಟ ಆಯಿತು ಎನ್ನತಕ್ಕ ಪ್ರಶ್ನೆಯನ್ನು ಇಲ್ಲಿ ಚರ್ಚೆ ಮಾಡುವುದು ಅಷ್ಟು ಸೂಕ್ತವಲ್ಲ. ಏಕೆಂದರೆ ಪ್ರಥಮವಾಗಿ ಇದರಿಂದ ನಷ್ಟ ಹೊಂದಿದಂಥವರು ಸಾಮಾನ್ಯ ಜನರು. ಕರ್ನಾಟಕ ರಾಜ್ಯದ ಸಾಮಾನ್ಯ ಜನ ನಷ್ಟ ಹೊಂದಿದಂಥವರು ಎರಡನೆಯದಾಗಿ ನಷ್ಟ ಹೊಂದಿರತಕ್ಕವರು ಆಡಳಿತ ಪಕ್ಷದವರು. ಏಕೆಂದರೆ ಹೊಸದಾಗಿ ಇಬ್ಬರೂ ಸರ್ಕಾರ ಮಾಡಿದ್ದಾರೆ. ಜೆಡಿ(ಎಸ್) ಮತ್ತು ಬಿಜೆಪಿಯವರು ಮಾಡಿದ್ದಾರೆ.

ಇನ್ನೂ ಅವರು 40 ತಿಂಗಳು ಸರ್ಕಾರ ನಡೆಸಬೇಕಾಗಿದೆ. ಅವರಿಗೆ ಅನುಭವ ಬೇಕಾಗಿತ್ತು. ಅವರು ತಿಳಿಯಬೇಕಾಗಿತ್ತು. ಇನ್ನೂ ನಮ್ಮ ಆಡಳಿತದಲ್ಲಿ ಏನೇನು ಲೋಪಗಳು ಇವೆ? ದೋಷಗಳಿದೆ? ಎಲ್ಲಿ ನಾವು ಎಡವಿದ್ದೇವೆ? ಎಲ್ಲಿ ನಾವು ತಪ್ಪು ಮಾಡಿದ್ದೇವೆ? ಎಲ್ಲಿ ಸರಿ ಇದ್ದೇವೆ ಎನ್ನತಕ್ಕದ್ದು ಮನವರಿಕೆ ಅವರಿಗೆ ಆಗುತ್ತಿತ್ತು. ಆ ಮನವರಿಕೆಯಿಂದ ಪಾಠ ಕಲಿತು ಉತ್ತಮವಾದಂತಹ ಆಡಳಿತವನ್ನು ನಡೆಸಲಿಕ್ಕೆ ಅವರಿಗೆ ಒಳ್ಳೆಯ ಅವಕಾಶ ಇತ್ತು. ಅದನ್ನು ಅವರು ಕಳೆದುಕೊಂಡರು. ನಮಗೆ ಜನರ ಪರವಾಗಿ ಇಲ್ಲಿ ನಿಂತು ಅದರಲ್ಲಿರತಕ್ಕಂಥ ಎಲ್ಲಾ ಲೋಪದೋಷಗಳನ್ನು ಎತ್ತಿ ಹಿಡಿಯತಕ್ಕಂಥ ಅವಕಾಶ ನಮಗೆ ಇತ್ತು. ಅದನ್ನು ನಾವೂ ಕಳೆದುಕೊಂಡೆವು. ಅಂದರೆ ನಮ್ಮ ಬೇಜವಾಬ್ದಾರಿತನದಿಂದ ಇವತ್ತು ಐದೂವರೆ ಕೋಟಿ ಸಾಮಾನ್ಯ ಜನರು ಬಲಿಪಶುಗಳು ಆದರು. ಅವರ ಹಿತಾಸಕ್ತಿಗಳನ್ನು ಕಾಪಾಡುವುದರಲ್ಲಿ ನಾವು ವಿಫಲರಾಗಿದ್ದೇವೆ. ನನಗಂತೂ ನಾವು ಈ ಸದನದಲ್ಲಿ ಕೂರಲಿಕ್ಕೆ ಅರ್ಹರಾ ಎಂದು ಅನ್ನಿಸುತ್ತಿದೆ. ನನಗಂತೂ ವೈಯಕ್ತಿಕವಾಗಿ ಅನ್ನಿಸುತ್ತಿದೆ. ನಾನು ಇಲ್ಲಿ ಕುಳಿತುಕೊಳ್ಳಲಿಕ್ಕೆ ಅರ್ಹನಾ ಎಂದು ಅನ್ನಿಸುತ್ತಿದೆ. ನಾನು ಪ್ರಶ್ನೆ ಹಾಕಿಕೊಂಡಿದ್ದೇನೆ. ನಾನು ಇಲ್ಲಿ ಕುಳಿತುಕೊಂಡಿರಲಿಕ್ಕೆ ಅರ್ಹನಾ ಎಂದು ಪ್ರಶ್ನೆ ಹಾಕಿಕೊಂಡಿದ್ದೇನೆ. ಯಾವ ಪುರುಷಾರ್ಥಕ್ಕೆ ನಾವಿಲ್ಲಿ ಬರಬೇಕು? ಯಾವ ಸಾಧನೆಗೋಸ್ಕರ ನಾವು ಇಲ್ಲಿ ಬರಬೇಕು? ಇದಕ್ಕೆ ನಾಳೆ ಯಾರು ಜವಾಬ್ದಾರರು? ಯಾರು ಹೊಣೆ? 45 ಸಾವಿರ ಕೋಟಿ ರೂಪಾಯಿ ಆಯವ್ಯಯ ರಾಜ್ಯದ್ದು. ಇವತ್ತು ಉಸಿರು ಇಲ್ಲದೇ, ಮರು ಮಾತು ಇಲ್ಲದೇ ಅದರಲ್ಲಿ ಏನು ಲೋಪ ಇದೆ? ಏನು ದೋಷ ಇದೆ? ಏನು ಒಳ್ಳೆಯ ಅಂಶಗಳು ಇವೆ ಎನ್ನತಕ್ಕದ್ದನ್ನು ಪರಿಗಣನೆಗೇ ತೆಗೆದುಕೊಳ್ಳದೇ ಇವತ್ತು ಇಂತಹ ಹೀನಸ್ಥಿತಿಗೆ, ದುರದೃಷ್ಟಕರವಾದಂತಹ ಸ್ಥಿತಿ ಈ ರಾಜ್ಯಕ್ಕೆ ಒದಗಿ ಬರಬಾರದಿತ್ತು ಎನ್ನತಕ್ಕದ್ದೇ ನನ್ನ ಅಭಿಪ್ರಾಯ. ಆದ್ದರಿಂದ ಈ ರೀತಿಯಲ್ಲಿ ಸದನವನ್ನು ನಡೆಸತಕ್ಕದ್ದು.

ಅಧ್ಯಕ್ಷರು: ಬೇಗ ಮುಗಿಸಿ. ಅನೇಕ ಅಜೆಂಡಾಗಳು ಇವೆ. ಅಜೆಂಡಾ ವಿಷಯಗಳ ಬಗ್ಗೆ ಹೇಗೋಣ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಇದು ಯಾರಿಗೂ ಕೂಡ ಶೋಭೆ ತರತಕ್ಕದ್ದು ಅಲ್ಲ. ಕರ್ನಾಟಕ ಜನತೆ ನಮ್ಮನ್ನು ಕ್ಷಮಿಸುವುದಿಲ್ಲ. ಅವರಿಗೆ ನಾವು ಕ್ಷಮಾಪಣೆ ಕೊಡಬೇಕಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು: ಈಗ ಎಲ್ಲರೂ ಮಾತನಾಡತಕ್ಕ ಅಗತ್ಯ ಇಲ್ಲ.

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ಸರ್ಕಾರ ಈ ಕರ್ನಾಟಕದ ಜನತೆಗೆ ಏನೇನು ಒಳ್ಳೆಯ ಕೆಲಸಗಳನ್ನು ಮಾಡಿದೆ. ಯಾವ ರೀತಿ ಬಜೆಟ್‌ನಲ್ಲಿ ಅದಕ್ಕೆ ಅನುಕೂಲ ಮಾಡಿಕೊಟ್ಟಿದೆ ಎನ್ನುವಂತಹ ವಿಚಾರವನ್ನು ತರಲಿಕ್ಕೆ ನಾವು ಪ್ರಯತ್ನ ಮಾಡಿದೆ. ಬಹುಶಃ ಅದು ಕಡತದಲ್ಲಿ ಇದೆ. ಆ ಪ್ರಸ್ತಾವನೆಗೆ ಅವಕಾಶವನ್ನು ಕಲ್ಪಿಸಿಕೊಡದೇ ಇರುವಂತಹ ಒಂದು ವ್ಯವಸ್ಥೆ ಯಾರಿಂದ ಆಯಿತು ಎನ್ನುವುದನ್ನು ಈ ಸದನ ತಿಳಿದುಕೊಳ್ಳಲೇ ಬೇಕಾಗಿದೆ.

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜ್: ಆದ್ದರಿಂದ ಈ ಸದನದಲ್ಲಿ ಯಾವುದೇ ಒಂದು ರೀತಿಯಲ್ಲೂ ಚರ್ಚೆಗೆ ಒಂದು ಅವಕಾಶ ಆಗಲಿಲ್ಲ ಎನ್ನುವಂತಹ ವಿಚಾರಗಳ ಮಂಡನೆ ಆಗಬಾರದು.

(ಅಡಚಣೆ)

ಅಧ್ಯಕ್ಷರು: ಮಾನ್ಯ ಮಂಜುನಾಥ್ ಅವರು ಮಾತನಾಡುತ್ತಾರೆ.

ಶ್ರೀ ಡಿ. ಮಂಜುನಾಥ್: ಒಂದು ವಿಚಾರ ಮಾತನಾಡಲು ತಮ್ಮ ಅಪ್ಪಣೆ ಕೇಳುತ್ತೇನೆ.

ಅಧ್ಯಕ್ಷರು: ಮಾತನಾಡಿ.

ಶ್ರೀ ಡಿ. ಮಂಜುನಾಥ್ (ಹಿರಿಯೂರು): ಮಾನ್ಯ ಅಧ್ಯಕ್ಷರೆ, ನಾನು 38 ವರ್ಷದ ಕೆಳಗೆ ನಿಮ್ಮ ಸೀಟಿನೊಳಗೆ ಕುಳಿತುಕೊಳ್ಳುವ ಸಂದರ್ಭ ಬಂತು. ಕುಳಿತುಕೊಂಡು ಸಭೆ ನಡೆಸಿದ್ದೇನೆ. ಡೆಪ್ಯುಟಿ ಸ್ಪೀಕರ್ ಆಗಿ ; ಮೂರು ವರ್ಷ, ವೈಕುಂಠ ಬಾಳಿಗಾ ಅವರು ಸತ್ತ ಮೇಲೆ ಒಂದು ವರ್ಷ ನಾನು ಸ್ಪೀಕರ್ ಆಗಿ ಕೆಲಸ ಮಾಡಿದ್ದೇನೆ. ಆಗ ವಿರೋಧ ಪಕ್ಷದಲ್ಲಿ 70 ಜನರಿದ್ದರು. ನನಗೆ ಬಹಳ ನೋವಾಗುತ್ತಿದೆ. ನಾನು ಯಾವಾಗಲೂ ಮಾತನಾತನಾಡಿಲ್ಲ. ನಾನು ವೀಕ್ಷಣೆ ಮಾಡುತ್ತಿದ್ದೆ. ಇಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದು ಸರಿಯೆಂದು ಅನ್ನಿಸುತ್ತದೆ. 1967ರಲ್ಲೇ ಇಲ್ಲಿ ವಾಟಾಳ್ ನಾಗರಾಜ್‌ರವರು ಇದ್ದರು. ನಾನು ಆಗ ಸ್ಪೀಕರ್ ಆಗಿದ್ದೆ. ಆಗ ಚರ್ಚೆಯಾಗುತ್ತಿತ್ತು. ಆಗ ಸಾಹುಕಾರ್ ಚೆನ್ನಯ್ಯ ಸಿದ್ದವೀರಪ್ಪನವರು, ಹೆಚ್.ಎಂ. ಚೆನ್ನಬಸಪ್ಪನವರು, ಗೋಪಾಲಗೌಡ ಎಲ್ಲರೂ

ಇದ್ದರು. ಬೆಂಗಳೂರು ವಾಟರ್ ಟ್ಯಾಕ್ಸ್ ವಿಚಾರದಲ್ಲಿ ಅವರುಗಳು ಒಂದೇ ಒಂದು ಸಲ ಬಾವಿಗೆ ಬಂದಿದ್ದರು. ಈ ಸಭೆಗೆ ಈಗ ಟೆಲಿಕಾಸ್ಟ್ ಇದೆ. ಆಗ ಇದು ಇರಲಿಲ್ಲ. ಆಗ ಕೇವಲ ಪೇಪರ್‌ನಲ್ಲಿ ಬರುತ್ತಿತ್ತು. ಇಲ್ಲಿ ನಡೆಯುತ್ತಿರುವ ನಡವಳಿಕೆಯನ್ನು ಇಡೀ ರಾಜ್ಯ ನೋಡುತ್ತಿದೆ. ಇಲ್ಲಿಯ ಕಲಾಪವನ್ನು ಇಡೀ ರಾಜ್ಯ ನೋಡುತ್ತಿದೆ. ತಾವೂ ಕೂಡ ಬಹಳ ಸಹನೆಯಿಂದ ಇದ್ದೀರಿ. ಸ್ಪೀಕರ್ ಆಗಿರುವವರಿಗೆ ಸಹನೆ ಇರಬೇಕು. ಆದರೆ, ವಿರೋಧ ಪಕ್ಷದವರು ಸಹ ಇತ್ತೀಚೆಗೆ ಎಷ್ಟು ಸಲ ಬಾವಿಗೆ ಬಂದಿದ್ದಾರೆ. ನಾನು ವಯಸ್ಸಿನಲ್ಲಿ ಹಿರಿಯವನಾಗಿ, 1967ರಿಂದ ಇಲ್ಲಿ ಇದ್ದೇನೆ. ತಮ್ಮೆಲ್ಲರಲ್ಲಿ ನಾನು ಮನವಿ ಮಾಡುವುದೇನೆಂದರೆ, ಈ ಸನದ ನಿಯಮಾವಳಿಯ ಪ್ರಕಾರ ನಡೆಯುತ್ತಿಲ್ಲ. ಅದನ್ನು ನಾವೆಲ್ಲಾ ನೋಡುತ್ತಿದ್ದೇವಲ್ಲಾ? ನಾನು ಇಲ್ಲಿಯವರೆಗೆ ಸುಮ್ಮನೆ ವೀಕ್ಷಕನಾಗಿದ್ದೆ. ಆದರೆ, ಈವತ್ತು ನಾನು ಮಾತನಾಡಲೇ ಬೇಕು ಎಂದು ಎದ್ದು ನಿಂತೆ. ಇಡೀ ರಾಷ್ಟ್ರದಲ್ಲಿ ಕರ್ನಾಟಕ ವಿಧಾನಪರಿಷತ್ತಿಗೆ, ವಿಧಾನ ಸಭೆಗೆ ಬಹಳ ಹೆಸರು ಇದೆ. ಒಂದು ಸಲ ಮಾನ್ಯ ಸಂಜೀವರೆಡ್ಡಿಯವರು ಲೋಕಸಭೆಯ ಸ್ಪೀಕರ್ ಆಗಿದ್ದಾಗ ಎಲ್ಲಾ ಸ್ಪೀಕರ್‌ಗಳ ಕಾನ್‌ಫರೆನ್ಸ್‌ನಲ್ಲಿ our Assembly is best Assembly ಎಂದು ಹೇಳಿದ್ದರು. ಕರ್ನಾಟಕದ ಅಸೆಂಬ್ಲಿ ಬಹಳ ಒಳ್ಳೆಯ ಅಸೆಂಬ್ಲಿ ಎಂದು ಹೇಳಿದ್ದರು. ಆದರೆ, ಈವತ್ತು ಏನಾಗುತ್ತಿದೆ? ಬಹಳ ಅಧೋಗತಿಗೆ ಹೋಗುತ್ತಿದೆ. ಚರ್ಚೆಯಾಗಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರುವುದಕ್ಕೆ ನಾನು ಒಪ್ಪುತ್ತೇನೆ. ಆದರೆ, ಚರ್ಚೆಯಾಗುವುದಕ್ಕೆ ಅವಕಾಶ ಎಲ್ಲಿ ಬಂತು? ವೆಲ್‌ನಲ್ಲಿ ಬಂದು ಎಲ್ಲಾ ವಿರೋಧ ಪಕ್ಷದವರು ನಿಂತು ಸ್ಪೀಕರ್‌ಗೆ ಧಿಕ್ಕಾರವನ್ನು ಕೂಗುತ್ತಾರೆ? ನಾಚಿಕೆಗೇಡು. ಸ್ಪೀಕರ್‌ರವರು ತಾರತಮ್ಯ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಹೀಗಾದರೆ ಹೇಗೆ? ಜನರು ನಮ್ಮನ್ನು ನೋಡುತ್ತಿದ್ದಾರೆ. ಇಡೀ ರಾಜ್ಯದ ಜನರು ನೋಡುತ್ತಿದ್ದಾರೆ. ದಯವಿಟ್ಟು ಟೆಲಿಕ್ಯಾಸ್ಟ್‌ನ್ನು ತೆಗೆಸಿದರೆ ಒಳ್ಳೆಯದು ಎಂದು ಅನ್ನಿಸುತ್ತದೆ. ಮೊನ್ನೆ ನಾನು ಹಳ್ಳಿಗೆ ಹೋದಾಗ ಏನು ಸ್ವಾಮಿ ಸಭೆ ಈ ರೀತಿ ನಡೆಯುತ್ತಿದೆ ಎಂದು ಕೇಳುತ್ತಾರೆ. ಅದಕ್ಕೆ ನಾನೇನು ಉತ್ತರ ಹೇಳಬೇಕು? ಬಹುತೇಕ ನೀವೇಲ್ಲಾ ನಿಮ್ಮ ಕ್ಷೇತ್ರಗಳಿಗೆ ಹೋದಾಗ ಏತಕ್ಕೆ ಹೋಗಿದ್ದಿರಿ, ಏನು

ಚರ್ಚೆಯಾಯಿತು? ಎಂದು ಕೇಳುತ್ತಾರೆ. ನಮ್ಮಲ್ಲಿ ಈವತ್ತು ಪ್ರಮುಖವಾದ ವಿಷಯಗಳು ಇವೆ. ಕೃಷಿ ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳು ಇಲ್ಲಿ ಚರ್ಚೆಯೇ ಆಗಲಿಲ್ಲ. ಅದಕ್ಕೆ ಅವರು ಅವಕಾಶ ಕೊಡಲಿಲ್ಲ. ವಿರೋಧ ಪಕ್ಷದವರಿಗೆ ನಾನು ಪ್ರಾರ್ಥನೆ ಮಾಡುವುದೇನೆಂದರೆ, ಎಲ್ಲರಲ್ಲೂ ನಾನು ಪ್ರಾರ್ಥನೆ ಮಾಡುವುದೇನೆಂದರೆ, ಈ ಸಭೆಯು ಜನರು ಮೆಚ್ಚುವ ರೀತಿಯಲ್ಲಿ ನಡೆಯಬೇಕು. ನಾನು ಯಾವತ್ತೂ ಮಾತನಾಡದೇ ಸುಮ್ಮನೆ ಕುಳಿತಿದ್ದೆ. ಈವತ್ತೇ ನಾನು ಮಾತನಾಡಲು ಎದ್ದಿದ್ದು. ನನ್ನ ಮನಸ್ಸಿಗೆ ನೋವಾಗಿದೆ. ಪಾಪ ವಾಟಾಳ್‌ನವರೂ ಸಹ ಹೊರಗಡೆ ಹೋಗಿಬಿಟ್ಟರು. ಅವರು 1967ರಲ್ಲಿ ಮೊದಲ ಸಲ ಇಲ್ಲಿಗೆ ಬಂದಿದ್ದರು. ರಾಜ್ಯದ ಜ್ವಲಂತ ಸಮಸ್ಯೆಗಳು ಇದ್ದಾವೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೇ ನಾವು ಬಂದಿರುವುದು. ಆದರೆ, ಚರ್ಚೆಯಾಗಲಿಲ್ಲ. ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಸಹಕರಿಸಿಕೊಂಡು ಹೋದರೆ ಮಾತ್ರ ಸ್ಪೀಕರ್‌ರವರಿಗೆ ಸಭೆ ನಡೆಸುವುದಕ್ಕೆ ಸಾಧ್ಯ. ಅದರಲ್ಲೂ Speaker is helpless ನಾವೆಲ್ಲರೂ ಸೇರಿ ಸಹಕಾರ ಕೊಡಬೇಕಾಗುತ್ತದೆ. ಆ ರೀತಿಯ ಸಹಕಾರ ಕೊಡುವುದನ್ನು ನಾನು ನೋಡಲಿಲ್ಲ. ಸ್ಪೀಕರ್‌ಗೆ ಧಿಕ್ಕಾರ ಹಾಕುತ್ತಾರೆ. ಬಹಳ ನೋವಾಗುತ್ತಿದೆ. ಮೊನ್ನೆ ಒಂದು ಘಟನೆ ನಡೆಯಿತು. ಅದನ್ನು ನೋಡಿಬಿಟ್ಟರೆ ಈ ಸಭೆಯ ಎಲ್ಲರೂ ತಲೆತಗ್ಗಿಸಬೇಕು. ಅದಕ್ಕೋಸ್ಕರ ಎಲ್ಲಾ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನಿಯಮಾವಳಿಯ ಪ್ರಕಾರ ನಡೆದುಕೊಳ್ಳಬೇಕು. ಅದರ ಜೊತೆಗೆ, Business Advisory Committee ನಲ್ಲಿ ತೀರ್ಮಾನ ಬಂತು. 14ರಂದು ಕೊನೆ ಎಂದು ಇತ್ತು 15 ಹೋಗಿ 16 ಹೋಗಿ 19ಕ್ಕೆ ಬಂತು. ಅದಕ್ಕೋಸ್ಕರ ನಿನ್ನೆ ವಿಧಿ ಇಲ್ಲದೆಯೇ ನಮ್ಮ ಹಣಕಾಸು ಮಂತ್ರಿಗಳು ಬೇಡಿಕೆಗಳನ್ನು ಮತಕ್ಕೆ ಹಾಕಬೇಕಾಗಿ ಬಂತು. ಗಿಲಿಟನ್ ಆಗಿರುವುದು ಇದು ಮೊದಲ ಸಲವೇನಲ್ಲ. ಈ ಹಿಂದೆ ಅನೇಕ ಸಲ ಆಗಿದೆ. ಆ ರೀತಿ ಅನೇಕ ಸಲ ಏಕೆ ಆಗಿದೆ ಎಂದರೆ, ವಿರೋಧ ಪಕ್ಷದವರು ಆಡಳಿತ ಪಕ್ಷದವರಿಗೆ ಸರಿಯಾಗಿ ಸಹಕರಿಸದಿದ್ದರೆ ಆ ರೀತಿ ಆಗುತ್ತದೆ. ಯಾವುದೋ ಒಂದು ವಿಷಯಕ್ಕೆ, ಆ ಬಿಎಂಐಸಿನಲ್ಲಾಯಿತು. ಎಷ್ಟು ಸಮಯವನ್ನು ನೀವು ವೇಸ್ಟ್ ಮಾಡಿದಿರಿ? ಇದು ಯಾರ ದುಡ್ಡು? ಒಂದು ನಿಮಿಷಕ್ಕೆ ಲಕ್ಷಾಂತರ

ರೂಪಾಯಿ ಇದಕ್ಕೆ ಖರ್ಚಾಗುತ್ತದೆ. ಅದು ಬಡ ಬೋರೇಗೌಡನ ದುಡ್ಡು. ಎಷ್ಟು ಸಮಯ ಇದಕ್ಕೆ ವ್ಯಯ ಮಾಡಿದಿರಿ? ಸ್ಪೀಕರ್ ಬರುತ್ತಾರೆ, adjourn ಮಾಡುತ್ತಾರೆ. ಹೋಗುತ್ತಾರೆ. ಮತ್ತೆ ಬರುತ್ತಾರೆ adjourn ಮಾಡುತ್ತಾರೆ, ಹೋಗುತ್ತಾರೆ. ಹೀಗಾದರೆ ಹೇಗೆ? ಕರ್ನಾಟಕದ ಅಸೆಂಬ್ಲಿಗೆ ಒಳ್ಳೆಯ ಹೆಸರಿದೆ, ಒಳ್ಳೆಯ ಪರಂಪರೆ ಇದೆ. ಆದ್ದರಿಂದ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಎಲ್ಲರೂ ಸೇರಿ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕು. ಚರ್ಚೆಯಾಗದಿದ್ದ ಬಗ್ಗೆ ನನಗೂ ಬಹಳ ನೋವಿದೆ. ನಾನು ಡೆಪ್ಯುಟಿ ಸ್ಪೀಕರ್ ಆಗಿದ್ದಾಗ 40 ದಿವಸ ಸಭೆ ನಡೆಯಿತು. ಪ್ರತಿ ಬೇಡಿಕೆಯ ಮೇಲೆ ಚರ್ಚೆಯಾಗುತ್ತಿತ್ತು. ಮಂತ್ರಿಗಳು ಪ್ರತಿ ಬೇಡಿಕೆಯ ಮೇಲೆ ಉತ್ತರ ಹೇಳುತ್ತಿದ್ದರು. ಆದರೆ, ಈವತ್ತಿನ ದಿವಸ ಏನಾಗುತ್ತಿದೆ? ಎಲ್ಲರೂ ಬಾವಿಗೆ ಬಂದು ನಿಂತುಕೊಂಡರೆ ಹೇಗೆ? ಬಾವಿಗೆ ಬಂದು ಮಾತನಾಡಿದರೆ ಅದು ರೆಕಾರ್ಡ್ ಆಗಬಾರದು. ಆದ್ದರಿಂದ, ಅವರು ಮಾತನಾಡಬಾರದು ಎಂದು ನಿಯಮಾವಳಿಯಲ್ಲಿ ಇದೆ. ಆದರೆ, ಎಲ್ಲಾ ನಿಯಮಾವಳಿಯನ್ನು ಗಾಳಿಗೆ ತೂರಿ ನಮ್ಮ ಸಭೆ ಆಗುತ್ತಿದೆ. ಇದರಿಂದ ನನಗೆ ಬಹಳ ನೋವಾಗಿದೆ. ಆದ್ದರಿಂದ, ಎಲ್ಲಾ ಮಾನ್ಯ ಸದಸ್ಯರಲ್ಲೂ ನಾನು ಮನವಿ ಮಾಡುವುದೇನೆಂದರೆ ಸ್ಪೀಕರ್ ಹೇಳುವುದಕ್ಕೆ ಮಾನ್ಯತೆ ಕೊಡಬೇಕಾಗುತ್ತದೆ. ಆದ್ದರಿಂದ, ಎಲ್ಲರೂ ಸೇರಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಹಕಾರ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಅಡಚಣೆ)

ಅಧ್ಯಕ್ಷರು: ಈಗ ಅಜೆಂಡಾದಲ್ಲಿರುವುದರ ವಿಚಾರಗಳ ಬಗ್ಗೆ ಹೋಗೋಣ. ಈ ಕಡೆ ಆ ಕಡೆ ಇಬ್ಬರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಮೇಲ್ಮನೆಯಲ್ಲಿ ಸಭಾಪತಿಯಾಗಿ ಜವಾಬ್ದಾರಿಯಿಂದ ಕೆಲಸ ಮಾಡಿದ್ದೇನೆ. ನನಗೂ ಸ್ವಲ್ಪ ಅನುಭವವಿದೆ. ಮಾನ್ಯ ಮಂಜುನಾಥ್‌ರವರ ಭಾವನೆಗಳನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನನಗೂ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಸ್. ರಾಜೇಂದ್ರನ್: ನನಗೆ ಎರಡು ನಿಮಿಷ ಅವಕಾಶ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಕೊನೆಯಲ್ಲಿ ಮಾತನಾಡಿ. ಎಲ್ಲರೂ ಒಂದೆರಡು ನಿಮಿಷ ಮಾತನಾಡುತ್ತಾರೆ.

(ಅಡಚಣೆ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರೆಲ್ಲರೂ ಮಾತನಾಡಿದ್ದಾರೆ. ಆದ್ದರಿಂದ ನಾನು ಕೊನೆಯಲ್ಲಿ ಒಂದು ಹತ್ತು ನಿಮಿಷ ಮಾತನಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ದಯಮಾಡಿ ಅನಂತರ ಮಾತನಾಡಿ.

(ಅಡಚಣೆ)

ಅಧ್ಯಕ್ಷರು: ಒಂದೆರಡು ನಿಮಿಷ ಮಾತನಾಡಿ. ದಿನವೂ ಬಂದು ಕೇಳುವವರದ್ದನ್ನೆಲ್ಲಾ ಹಾಕಿಬಿಟ್ಟಿದ್ದೇನೆ. ಅವರು ಅವರ ಸಮಸ್ಯೆಗಳ ಬಗ್ಗೆ ಕೇಳಲಿ. ಆದ್ದರಿಂದ ನೀವು ಬೇಗ ಒಂದೆರಡು ನಿಮಿಷ ಮಾತನಾಡಿ.

(ಅಡಚಣೆ)

ಅಧ್ಯಕ್ಷರು: ಎಲ್ಲರಿಗೂ ಅವಕಾಶವನ್ನು ಹೇಗೆ ಕೊಡಲು ಆಗುತ್ತದೆ? ಮತ್ತೆ ಹಿಂದಿನದಕ್ಕೆ ಹೋಗುವುದು ಬೇಡ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಮೇಲ್ಮನೆಯಲ್ಲಿ ಸಭಾಪತಿಯಾಗಿ ಆ ಪೀಠದಲ್ಲಿ ಕುಳಿತು ಕೆಲಸ ಮಾಡಿದ್ದೇನೆ. ನನಗೂ ಕೂಡ ಅನುಭವದ ಮಾತುಗಳನ್ನು ಹೇಳಲು ಅವಕಾಶ ಕೊಡಬೇಕು. ನಾನು ಕೂಡ ಸಭಾಪತಿಯಾಗಿ : ಉಪಸಭಾಪತಿಯಾಗಿ ಕೆಲಸ ಮಾಡಿದ್ದೇನೆ. ನನಗೂ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು: ಅಜೆಂಡಾದಲ್ಲಿರುವುದನ್ನು ತೆಗೆದುಕೊಳ್ಳಬೇಕು. ನಿಮ್ಮದು ಬೇರೆ ಬೇರೆ ವಿಚಾರಗಳನ್ನು ತೆಗೆದುಕೊಂಡಂತಾಯಿತು. ಅದೇ ವಿಚಾರವನ್ನು ಮಾತನಾಡಿದ್ದಾರೆ. ಮತ್ತೆ ಮತ್ತೆ ಎಲ್ಲರೂ ಅದರ ಬಗ್ಗೆ ಮಾತನಾಡುತ್ತೇನೆಂದರೆ ಈವತ್ತಿನ ಅಜೆಂಡಾದ ಗತಿಯೇನಾಯಿತು? ಇದೇನೋ ನನಗೆ ಅರ್ಥವಾಗುವುದಿಲ್ಲ. ಯಾರೋ ಒಂದಿಬ್ಬರು ಮಾತನಾಡಿದರೆ ಮುಗಿದು ಹೋಯಿತು.

ಶ್ರೀ ಬಿ.ಆರ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, This is not a privilege. ಕೇವಲ ಫ್ಲೋರ್ ಲೀಡರ್ಸ್ ಮಾತನಾಡಬೇಕೆಂದೇನಿಲ್ಲ. ಈವತ್ತಿನ ಸಂದರ್ಭದಲ್ಲಿ ಎಲ್ಲರೂ ಕೂಡ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದಾರೆ. ನಾನು ಮೇಲ್ಮನೆಯಲ್ಲಿ ಸಭಾಪತಿಯಾಗಿ ಕೆಲಸ ಮಾಡಿದ್ದೇನೆ. ನನಗೆ ಒಂದೆರಡು ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಈಗ ಮಾನ್ಯ ಮಾಧುಸ್ವಾಮಿಯವರು ಒಂದೆರಡು ಮಾತುಗಳನ್ನಾಡುತ್ತಾರೆ. ದಯಮಾಡಿ.

ಶ್ರೀ ಬಿ.ಆರ್. ಪಾಟೀಲ್: ಎಲ್ಲದಕ್ಕೂ ಫ್ಲೋರ್ ಲೀಡರ್ಸ್‌ಗೆ ಅವಕಾಶ ಮಾಡಿಕೊಟ್ಟರೆ ಹೇಗೆ?

ಅಧ್ಯಕ್ಷರು: ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇದುವರೆಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಅದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಈ ಕಡೆಯಿಂದ ಹಿರಿಯ ಸದಸ್ಯರು ಹೇಳಿದ್ದಾರೆ. ಹೀಗೆ ಎಲ್ಲರಿಗೂ ಅವಕಾಶ ಕೊಡುತ್ತಾ ಹೋದರೆ ಈವತ್ತಿನ ಅಜೆಂಡಾದ ಗತಿಯೇನು? ನಾವು ಪ್ರತಿ ದಿನವೂ ಅಜೆಂಡಾ ಹಾಕಿ, ಹಾಕಿ ಹಾಗೇ ಮುಂದುವರೆಸಿಕೊಂಡು ಹೋಗುವುದು, ಯಾವುದೂ ರೀಚ್ ಆಗಲಿಲ್ಲ. ಇವೊತ್ತಿನ ಅಜೆಂಡಾದ ಗತಿ ಏನು? ಅದನ್ನು ನಿಮ್ಮ ವಿವೇಚನೆಗೇ ಬಿಡುತ್ತೇನೆ. ನಾನೇನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್: ನೀವು ಸಭಾಧ್ಯಕ್ಷರಾಗಿದ್ದು, ನೀವೇ ಹೀಗೆ ಮಾಡಿದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್: ನಮ್ಮನ್ನೆಲ್ಲಾ ಅಪರಾಧಿಗಳ ಸ್ಥಾನದಲ್ಲಿ ನಿಲ್ಲಿಸಿದ್ದೀರಿ. ನನಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಈಗ ತಾವೆಲ್ಲರೂ ಸೇರಿ ಒಂದು ಕೆಲಸ ಮಾಡಿ. ಇಲ್ಲಿ ಯಾವುದಾದರೊಂದು ಗೊಂಬೆ ಇಟ್ಟುಕೊಂಡು ನಿಮ್ಮ ಇಷ್ಟ ಬಂದಂತೆ ಮಾತನಾಡಬಹುದು. ಇಲ್ಲಿ ಮನುಷ್ಯರ್‍ಯಾರೂ ಕುಳಿತುಕೊಂಡು ಸದನ ನಡೆಸುವುದಕ್ಕೆ ಸಾಧ್ಯವಿಲ್ಲ. ಏನಿದು? ಎಲ್ಲರೂ ಮಾತನಾಡಬೇಕೆಂದರೆ ಹೇಗೆ ಅವಕಾಶ ಕೊಡುವುದು? ಅಜೆಂಡಾ ಪ್ರಕಾರ ಹೋಗೋಣ. ಹಿಂದೆ ನಡೆದ

ಘಟನೆಗಳಿಗೆ ಇಬ್ಬರು-ಮೂವರು ಸದಸ್ಯರುಗಳು ಮಾತನಾಡಿ ಉಪ ಸಂಹಾರ ಮಾಡಿ. ಅಜೆಂಡಾ ಪ್ರಕಾರ ತೆಗೆದುಕೊಳ್ಳೋಣ. ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ಬಿ.ಆರ್. ಪಾಟೀಲ್: ನಾನು ಮೇಲ್ಮನೆಯಲ್ಲೂ ಕೆಲಸ ಮಾಡಿದ್ದೇನೆ. ನಾನು ಮಾತನಾಡಲೇಬೇಕು.

ಅಧ್ಯಕ್ಷರು: ಈಗ ಯಾರಿಗೆ ಅವಕಾಶ ಕೊಡೋಣ? ಈಗ ಹಿರಿಯ ಸದಸ್ಯರಾದ ಎಸ್.ಎಸ್.ಪಾಟೀಲರು ಮಾತನಾಡಲಿ.

ಶ್ರೀ ಬಿ.ಆರ್. ಪಾಟೀಲ್: ಸರ್, ನಾನು ಮಾತನಾಡಲೇಬೇಕು.

ಅಧ್ಯಕ್ಷರು: ನಾನು ಎಸ್.ಎಸ್. ಪಾಟೀಲರನ್ನು ಕರೆದಿದ್ದೇನೆ. ಅನಂತರ, ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್: ಏನು ಸರ್ ಇದು? ನಾನು ಮಂಜುನಾಥರವರ ಜೊತೆ ಕೆಲಸ ಮಾಡಿದ್ದೇನೆ. ತಾವು ಹೇಳಿದ್ದನ್ನು ಒಪ್ಪುತ್ತೇನೆ. ನನಗೂ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು, ನಿಮಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಬಹುಶಃ ಮಂಜುನಾಥ್‌ರವರು ಹಾಗೇ ಮೌನವಾಗಿ ಕುಳಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಾವೂ ಕೂಡ ಧರಣಿ ಕೈಗೊಂಡು ನಮ್ಮ ಹಿರಿಯರು ಏನು ಮಾತನಾಡುತ್ತಾರೆ, ಅದಕ್ಕೆ ನಾವು ಬೆಂಬಲವಾಗಿ ನಿಂತಿದ್ದೇವೆ. ಇವೊತ್ತು ಇಲ್ಲಿ ಸಂಪೂರ್ಣವಾಗಿ ನಾವು ಏನು ಧರಣಿ ಮಾಡಿದ್ದೇವೆ, ನಾವೆಲ್ಲರೂ ಅಪರಾಧಿಗಳು ಎನ್ನುವ ರೀತಿಯಲ್ಲಿ ಇದುವರೆಗೂ ತೀರ್ಮಾನವಾಗಿದೆ. ನೀವು 'ಹೌದು, ಹೌದು' ಎನ್ನಬೇಡಿ. ಇದ್ದಂತಹವರೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಧರಣಿ ಕುಳಿತಿದ್ದೇವೆ, ಬಹುಶಃ ನಾನು ತಮಗೆ ಹೇಳುತ್ತೇನೆ.

(ಅಡಚಣೆ)

ಶ್ರೀ ಎಸ್.ಎಸ್. ಪಾಟೀಲ್: ನನಗೆ ಅವಕಾಶ ಕೊಡದಿದ್ದರೆ, ಹೇಗೆ ಮಾತನಾಡುವುದು?

ಅಧ್ಯಕ್ಷರು: ಮಾತನಾಡಿ. ಅಡ್ಡ ಮಾತನಾಡುವಂತಾದ್ದು ಇಲ್ಲಿ ಸರ್ವೇ ಸಾಧಾರಣ ವಿಚಾರವಾಗಿದೆ. ಎಲ್ಲವನ್ನೂ ಗಮನವಿಟ್ಟು ಕೇಳುವ ಕಾಲ ಹೊರಟುಹೋಗಿದೆ.

ಶ್ರೀ ಎಸ್.ಎಸ್. ಪಾಟೀಲ್: ನೀವು ಬಿಗಿ ಮಾಡಬೇಕು.

ಅಧ್ಯಕ್ಷರು: ನಾವೇನು ಬಿಗಿ ಮಾಡಬೇಕು?

ಶ್ರೀ ಎಸ್.ಎಸ್. ಪಾಟೀಲ್: ನಮ್ಮನ್ನು ಹೊರಗಡೆ ಹಾಕಿ. ಕೈ ಎತ್ತಿ ಮಾತನಾಡಿದವರನ್ನು ಹೊರಕ್ಕೆ ಹಾಕಿ. ಪ್ರಕಾಶ್‌ರವರೆ, ದಯವಿಟ್ಟು ಈ ಕಡೆ ಲಕ್ಷ್ಯ ಕೊಡಬೇಕು.

ಅಧ್ಯಕ್ಷರು: ಇಲ್ಲಿರತಕ್ಕಂಥ ಎಲ್ಲರೂ ಹಿರಿಯ ಸದಸ್ಯರಾಗಿದ್ದು, ಜನರಿಂದ ನೇರವಾಗಿ ಆಯ್ಕೆಯಾಗಿ ಬಂದಿರುವವರಾಗಿದ್ದೀರಿ. ನಾನೇನು ಮಾಡುವುದಕ್ಕಾಗುತ್ತದೆ? ನೀವುಗಳು ನಿಮ್ಮ ಜವಾಬ್ದಾರಿಗಳನ್ನು ಅರಿತುಕೊಂಡು ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ನೀವು ಬಿಗಿ ಮಾಡಬೇಕು. ಎಸ್.ಎಸ್. ಪಾಟೀಲ್ ಏನಾದರೂ ರೂಲ್ಸ್ ಬಿಟ್ಟು ನಡೆಯುತ್ತಿದ್ದರೆ, ಕಟ್ಟುನಿಟ್ಟಾಗಿ ಹೊರಕ್ಕೆ ಹಾಕಿ. ಇವೊತ್ತು ಅಸೆಂಬ್ಲಿ ಏಕೆ ನಡೆಯುವುದಿಲ್ಲವೆಂಬುದನ್ನು ನೋಡೋಣ. ನೀವು ಹೊರಕ್ಕೆ ಹಾಕಿ, ನೋಡೋಣ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಈಗ ಏನಾಗಿದೆ ಎಂದರೆ, ನಾವು ಧರಣಿ ಕೂರುವುದು ತಪ್ಪು ಎನ್ನುವ ಅರ್ಥದಲ್ಲಿ ಇಷ್ಟು ಹೊತ್ತಿನ ತನಕ ಚರ್ಚೆಯಾಗಿದೆ. ನಾನು ಹೇಳುತ್ತೇನೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ನೋಡುತ್ತಾ ಬಂದಿದ್ದೇವೆ, ಮಾಡುತ್ತಾ ಬಂದಿದ್ದೇವೆ. ಪ್ರಸಂಗ ಬಂದಾಗ ನಮ್ಮನ್ನೂ ಎತ್ತಿ ಹೊರಕ್ಕೆ ಹಾಕಿದ್ದಾರೆ. ನಿಮಗೆ ಚರ್ಚೆ ಮಾಡಬೇಕೆನ್ನುವ ಇಚ್ಛೆ ಇದ್ದಿದ್ದರೆ, ನಮ್ಮನ್ನು ಹೊರಕ್ಕೆ ಹಾಕಿ ಚರ್ಚೆ ಮಾಡುತ್ತಿದ್ದಿರಿ, ಆದರೆ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅಧಿವೇಶನದ ಮೊದಲ ದಿವಸವೇ ನನು ತಮಗೆ ಹೇಳಿದೆ. ಇದು ಸರ್ಕಾರ ನಡೆಸುವ ರೀತಿಯೇ? ಹೇಗೆ? ಎಂದು. ಎಲ್ಲಾ ಡಿಮ್ಯಾಂಡ್‌ಗಳನ್ನೂ ಮಂಡಿಸಿದ್ದೀರಿ, ನಿರ್ವಹಣಾ ಮುಂಗಡ ಪತ್ರ ಬಂದಿಲ್ಲವೆಂದು ಮೊದಲನೇ ದಿವಸವೇ ತಮಗೆ ಹೇಳಿದಾಗ, ತಾವು ಸಂಬಂಧಪಟ್ಟ ಎಲ್ಲರಿಗೂ ಬೈದಿರಿ. ಇವೊತ್ತಿಗೂ ಕೂಡ

ಐದು ಇಲಾಖೆಗಳನ್ನು ಹೊರತುಪಡಿಸಿ ಉಳಿದ ಯಾವುದೇ ಇಲಾಖೆಗಳಿಗೆ ಸಂಬಂಧಿಸಿದಂತೆ ಬಂದಿಲ್ಲ. ನೀವು ಮಂಜೂರು ಮಾಡಿಕೊಂಡಿರಿ. ಅಧ್ಯಕ್ಷರೆ, ತಾವೇ ಹೇಳಿ, ಇದು ಸರಿಯೇ? ಇದು ಸದನ ನಡೆಸುವ ರೀತಿಯೇ? ನಾನು ಉಳಿದ ಯಾವುದರ ಬಗ್ಗೆಯೂ ಮಾತನಾಡುವುದಿಲ್ಲ. ತಪ್ಪು-ಒಪ್ಪುಗಳನ್ನು ನಾವು ಅನಂತರ ಚರ್ಚೆ ಮಾಡಿಕೊಳ್ಳೋಣ. ಇವೊತ್ತು ಬೇಡಿಕೆಗಳನ್ನು ಮಂಡಿಸಿದ್ದೀರಿ. ಯಾವುದರ ಮೇಲೆ ನಾವು ಚರ್ಚೆ ಮಾಡಬೇಕು? ಇದರ ಬಗ್ಗೆ ನಾನು ಮೊದಲನೇ ದಿವಸವೇ ಹೇಳಿದೆ. ಈಗ ನಮಗೆ ಬಂದಿರುವುದನ್ನು ಹೇಳುತ್ತೇನೆ. ಸುಮ್ಮನೆ ಹಾಗೆ ಮಂಜೂರು ಮಾಡಿಕೊಂಡುಬಿಟ್ಟರು. ಪ್ರಕಾಶ್‌ರವರು ಇದರ ಬಗ್ಗೆ ಪ್ರಾಮಾಣಿಕವಾಗಿ ಹೇಳಬೇಕು. ಇದು ಸದನ ನಡೆಸುವ ರೀತಿಯೇ? ಹೇಗೆ? ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಶಿಕ್ಷಣ, ಲೋಕೋಪಯೋಗಿ, ವೈದ್ಯಕೀಯ ಶಿಕ್ಷಣ, ಕಾನೂನು ಹಾಗೂ ಸಂಸದೀಯ ವ್ಯವಹಾರ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಇಷ್ಟು ಇಲಾಖೆಗಳಿಗೆ ಸಂಬಂಧಿಸಿದಂತೆ ಮಾತ್ರ ಮಾಹಿತಿಗಳು ಬಂದಿವೆ. ಇದು ಬಿಟ್ಟು ಉಳಿದ 23 ಇಲಾಖೆಗಳಿಗೆ ಸಂಬಂಧಿಸಿದಂತೆ ಬಂದಿಲ್ಲ. ಇದು ಅಸೆಂಬ್ಲಿ ನಡೆಸುವ ರೀತಿಯೇ? ನೀವು ಹೇಗೆ ಮಂಜೂರು ಮಾಡಿಕೊಂಡಿರಿ? ಇದನ್ನು ಮಂಡಿಸುವ ಮುನ್ನ ಫೈನಾನ್ಸ್ ಮಿನಿಸ್ಟರ್ ಆಗಿರುವ ನೀವು ಮೊದಲೇ ಇದನ್ನೆಲ್ಲಾ ನಮಗೆ ಕೊಡಬೇಕಾಗಿತ್ತು. ಮಂಜೂರು ಮಾಡಿಸಿಕೊಂಡು ಅದನ್ನು ದಾಖಲೆ ಮಾಡಿಕೊಂಡಿದ್ದಾರೆ, ಗಿಲಿಟಿನ್ ಮಾಡಿಕೊಂಡಿರಿ. ಅದು ಪದ್ಧತಿ, ಮಾಡಿಕೊಂಡಿರಿ, ಒಪ್ಪೋಣ. ಆದರೆ, ಇದು ಪದ್ಧತಿಯೇ? 45 ಸಾವಿರ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಕೊಳ್ಳುವ ರೀತಿ ಇದೇನಾ? ಏಕೆ ನಮಗೆ ಕಳುಹಿಸಿಕೊಟ್ಟಿಲ್ಲ? ಅಧ್ಯಕ್ಷರೆ, ನಿಮಗೆ ಹೇಳಿದ್ದೇನೆ. ಮರ್ಯಾದೆ ಇದ್ದರೆ, ಮರುದಿವಸವಾದರೂ ಕಳುಹಿಸಬೇಕಾಗಿತ್ತೆಂದು ನೀವು ಬೈದಿರಿ. ಅದು ಇವೊತ್ತಿನ ತನಕವೂ ಆಗಿಲ್ಲ. ಒಬ್ಬೊಬ್ಬ ಮಂತ್ರಿಗಳು ಉತ್ತರ ಕೊಡಲಿ. ಈಗ ಮುಖ್ಯಮಂತ್ರಿಗಳದ್ದು ಆದ ನಂತರ, ಉಳಿದ ಮಂತ್ರಿಗಳು ತಮ್ಮ-ತಮ್ಮ ಡಿಮ್ಯಾಂಡ್‌ಗಳ ಮೇಲೆ ಮಾತನಾಡಲಿ. ಏನೇನು ಮಾತನಾಡುತ್ತಾರೆಂಬುದನ್ನು ನೋಡೋಣ. ಅವರಿಗೇ

ಗೊತ್ತಿಲ್ಲ. ಯಾವ ಮಂತ್ರಿಗಳಿಂದಲಾದರೂ ಉತ್ತರ ಹೇಳಿಸಿ ನೋಡೋಣ. ಯಾವ ಮಂತ್ರಿಗಳಿಗೂ ಗೊತ್ತಿಲ್ಲ. ಬಹಳವೆಂದರೆ, ಹಿರಿಯರಾದ ನಾಲ್ಕು ಮಂತ್ರಿಗಳು ಮಾತನಾಡಬಹುದು. ನಿಮ್ಮ ಇಲಾಖೆಯದು ಎಲ್ಲಿದೆ? ಐದು ಇಲಾಖೆಗಳದ್ದು ಬಿಟ್ಟರೆ, ಉಳಿದ ಇಲಾಖೆಗಳಿಗೆ ಸಂಬಂಧಿಸಿದಂತೆ ನಿರ್ವಹಣಾ ಮುಂಗಡ ಪತ್ರಗಳು ಇವೊತ್ತಿನವರೆಗೂ ಬಂದಿಲ್ಲ. ಮತ್ತು ಹೇಗೆ ಚರ್ಚೆ ಮಾಡುವುದು? ಅಧ್ಯಕ್ಷರೆ, ನೀವು ಏಕೆ allow ಮಾಡಿದಿರಿ? ಇವೊತ್ತು ಇದನ್ನು allow ಮಾಡಬಾರದಾಗಿತ್ತು, ಏನಾದರೂ ಮಾಡಿ ನಮ್ಮನ್ನು ಹೊರಗಡೆ ಹಾಕಬೇಕಾಗಿತ್ತು. ಅವರಿಂದ ಮಂಜೂರು ಮಾಡಿಸುವುದಕ್ಕೆ allow ಮಾಡುವುದಕ್ಕೆ ಅವಕಾಶ ಕೊಟ್ಟಿದ್ದು ತಪ್ಪು. ಹೇಳಿದ ಪ್ರಕಾರ ಇದನ್ನು ನನಗೆ ಒದಗಿಸಿಕೊಟ್ಟಿಲ್ಲ. ಉಳಿದಂತೆ ಯಾವುದರ ಬಗ್ಗೆಯೂ ನಾನು ಚರ್ಚೆ ಮಾಡಲು ತಯಾರಿಲ್ಲ. ಪ್ರಕಾಶ್‌ರವರೆ, ಇದು ನಡೆಯತಕ್ಕಂಥ ವ್ಯವಸ್ಥೆಯೇ? ಇದು ಸರಿಯೇ? ಹೇಗೆ? ಅವರು ಉತ್ತರ ಕೊಡಬೇಕು.

ಶ್ರೀ ಬಿ.ಆರ್. ಪಾಟೀಲ್: ಇವೊತ್ತು ಈ ಸದನ ಬಹಳ ದಿವಸ ನಡೆಯಬೇಕು ಮತ್ತು ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕೆಂದು ಬಹುತೇಕವಾಗಿ ರಾಷ್ಟ್ರಮಟ್ಟದಲ್ಲಿ ಪೀಠಾಸೀನ ಅಧಿಕಾರಿಗಳ ಸಮ್ಮೇಳನ ಏನು ಜರುಗುತ್ತದೆ, ಅಲ್ಲೆಲ್ಲಾ ಬಹಳ ಗಂಭೀರವಾಗಿ ಈ ಕುರಿತು ಚರ್ಚೆ ನಡೆದಿದೆ. ಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದಾಗ, 'ಕನಿಷ್ಟ ನೂರು ದಿವಸಗಳಾದರೂ ಈ ಸದನ ನಡೆಯಬೇಕು' ಎಂದು ಒಂದು ಮಾತು ಕೊಟ್ಟರು. ಅದಾದ ನಂತರ ಇವೊತ್ತನಿವರೆಗೂ ಒಂದು ನೂರು ದಿವಸಗಳ ಕಾಲ ಸದನ ಸೇರುವುದಕ್ಕಾಗಲಿಲ್ಲ. ಈ ಸದನ ಸಾಕಷ್ಟು ದಿವಸಗಳ ಕಾಲ ನಡೆಯಬೇಕೆಂದು ತಾವೂ ಪ್ರಯತ್ನ ಮಾಡಿದಿರಿ. ಬಿಲ್ ಸಹ ಪಾಸ್ ಆಯಿತು. ಕನಿಷ್ಠ ಪಕ್ಷ ವರ್ಷದಲ್ಲಿ ಅರವತ್ತು ದಿವಸಗಳು ಸದನವನ್ನು ನಡೆಸಲೇಬೇಕೆಂದು ನಾವು ಒಂದು ಕಾನೂನು ಮಾಡಿಕೊಂಡಿದ್ದೇವೆ. ಈಗ ಮಂಜುನಾಥ್‌ರವರು ಮೇಲ್ಮನೆಯಲ್ಲಿ ಅಧ್ಯಕ್ಷರಾಗಿದ್ದರು, ನಾನು ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಈ ರಾಜ್ಯ ನಿರೀಕ್ಷಿಸುತ್ತಿರುವಂಥಾದ್ದು, ನಮ್ಮ ಪ್ರತಿನಿಧಿಗಳನ್ನು ಶಾಸನಸಭೆಗೆ ಕಳುಹಿಸಿದ್ದೇವೆ. ರಾಜ್ಯದ ವಿವಿಧ ಸಮಸ್ಯೆಗಳಾದ ಕೃಷಿ, ಶಿಕ್ಷಣ, ಆರೋಗ್ಯ,

ನೀರಾವರಿ, ಗ್ರಾಮೀಣಾಭಿವೃದ್ಧಿ, ವಿದ್ಯುಚ್ಛಕ್ತಿ, ಸಮಾಜ ಕಲ್ಯಾಣ ಇಲಾಖೆಗಳಾಗಿರಬಹುದು, ಅನೇಕ ಸಮಸ್ಯೆಗಳ ಬಗ್ಗೆ ನಾವು ಏನಾದರೊಂದು ಪರಿಹಾರ ಕಂಡು ಹಿಡಿಯುವುದಕ್ಕೆ ಈ ಸದನ ಪ್ರಯತ್ನ ಮಾಡುತ್ತದೆ, ಅವರಿಗೆ ನಾವು ಏನಾದರೂ ಅನುಕೂಲ ಮಾಡಿಕೊಡುತ್ತೇವೆಂಬ ನಿರೀಕ್ಷೆಯಿಂದ ನಮ್ಮ ಕಡೆ ನೋಡುತ್ತಿದ್ದಾರೆ. ಆ ದಿಕ್ಕಿನಲ್ಲಿ ಸರ್ಕಾರ ಕೂಡ ತನ್ನ ಬಜೆಟ್‌ನಲ್ಲಿ ಏನೇನು, ಎಷ್ಟೆಷ್ಟು ದುಡ್ಡು ಕೊಡಬೇಕು, ಯಾವ್ಯಾವ ಇಲಾಖೆಗಳಿಗೆ ಏನೇನು ಮಾಡಬೇಕು ಎಂಬುದನ್ನೆಲ್ಲಾ ನಮೂದಿಸಿದೆ. ಇಲ್ಲಿ ಬಜೆಟ್ ಮಂಡನೆಯಾದ ನಂತರ, ಸದಸ್ಯರಾದ ನಾವೆಲ್ಲರೂ ಆ ಬಗ್ಗೆ ಸಲಹೆ, ಸೂಚನೆಗಳನ್ನು ಕೊಡಬಹುದು ಇಲ್ಲವೇ ವಿರೋಧಿಸಬಹುದು. ಸರ್ಕಾರ ಕೂಡ ನಮ್ಮ ವಿಚಾರಗಳನ್ನು ತಿಳಿದುಕೊಂಡು ತಿದ್ದುಪಡಿ ಮಾಡಿಕೊಳ್ಳಬಹುದು. ಇದೊಂದು ಸದನದ ಸತ್ಸಂಪ್ರದಾಯ. ಮಾನ್ಯ ಅಧ್ಯಕ್ಷರೆ, ನಾನು ಮೊದಲನೇ ಸಲ ಈ ಸದನಕ್ಕೆ ಬಂದಾಗ ತಮ್ಮನ್ನು ಅಭಿನಂದಿಸುತ್ತಾ ಒಂದು ಮಾತನ್ನು ಹೇಳಿದ್ದೆ. ಬಹುಶಃ, ಇವೊತ್ತು ಅದು ರೆಕಾರ್ಡ್‌ನಲ್ಲಿದೆ. ಬಹಳಷ್ಟು ಹೊಸ ಸದಸ್ಯರು ಈ ಸದನಕ್ಕೆ ಬಂದಿದ್ದಾರೆ. ಅವರಿಗೆ ಕಲಾಪ, ಇಲ್ಲಿನ ಪರಂಪರೆ, ಇಲ್ಲಿ ನಡೆಯುವ ಚರ್ಚೆ ಬಗ್ಗೆ ಅವರು ಇನ್ನು ಬಹಳ ತಿಳಿದುಕೊಳ್ಳಬೇಕು, ಅವರು ಉತ್ತಮ ಸಂಸದೀಯ ಪಟುಗಳಾಗಬೇಕು. ಈ ದಿಕ್ಕಿನಲ್ಲಿ ಸದನವನ್ನು ತೆಗೆದುಕೊಂಡು ಹೋಗಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ, ನಾನೂ ಆಸೆಪಟ್ಟಿದ್ದೆ. ಆದರೆ, ಇವೊತ್ತು ನನಗೂ ನಿರಾಶೆಯಾಗಿದೆ. ಯಾವ ಮಟ್ಟದಲ್ಲಿ ಈ ಸದನ ನಡೆಸಿಕೊಂಡು ಹೋಗಬೇಕಾಗಿತ್ತೋ, ಆ ಮಟ್ಟದಲ್ಲಿ ಈ ಸದನವನ್ನು ನಡೆಸುವುದಕ್ಕಾಗಿಲ್ಲ. ಇದರ ಬಗ್ಗೆ ನಾನು ಆ ಕಡೆ, ಈ ಕಡೆ ಆರೋಪಿಸುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂಜುನಾಥ್‌ರವರು ಇಡೀ ಸದನಕ್ಕೆ ಹಿರಿಯರು. ನಾನು ಒಂದು ಸಲಹೆ ಕೊಡುತ್ತೇನೆ. ಆಗಿದ್ದು ಆಗಿಹೋಗಿದೆ. ಜುಲೈ 31ರವರೆಗೆ ಕೂಡ ಈ ಸದನ ನಡೆಸುವ ಸಾಧ್ಯತೆಗಳಿವೆ, ಅವಕಾಶಗಳಿವೆ. ತಾವು ಶಾಸಕಾಂಗ ಪಕ್ಷದಲ್ಲಿದ್ದೀರಿ. ತಾವೇ ಒಂದು ಸಲಹೆ ಸರ್ಕಾರಕ್ಕೆ ಒಪ್ಪಿಸಿ. ಇನ್ನು ಮುಂದೆ ಯಾವುದೇ ಪ್ರಶ್ನೆಗಳು ಬೇಡ, ಗಮನ ಸೆಳೆಯುವ ಸೂಚನೆಗಳು ಬೇಡ, ಯಾವುದೇ zero hour ಬೇಡ, ಗಂಭೀರವಾಗಿ ಒಂಭತ್ತು ದಿವಸ

ಕುಳಿತುಕೊಂಡು ಇಲಾಖಾವಾರು ನಾವು ಚರ್ಚೆಯನ್ನು ಬೆಳಿಗ್ಗೆ 10 ಗಂಟೆಯಿಂದ ರಾತ್ರಿ ಎಂಟು ಗಂಟೆವರೆಗೆ ಬೇಕಾದರೂ ಕೂಡಾ ಚರ್ಚೆ ಮಾಡಿ. ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ಒಳ್ಳೆಯ ಗೌರವ ತರುವಂತಹ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಈಗ 'ಬಾವಿಯಲ್ಲಿ ಬಿದ್ದರು' ಬಾವಿಯಲ್ಲಿ ಬಿದ್ದರು' ಎಂದು ಈ ಕಡೆಯಿಂದ ಹೇಳುತ್ತೇವೆ. ಇದಕ್ಕೆ ಸರ್ಕಾರದ ಹಠಮಾರಿ ಧೋರಣೆಯೂ ಕಾರಣವಾಗಿದೆ. ಅನೇಕ ಸಾರಿ ಇಂತಹ ಸಂದರ್ಭಗಳು ಬರುತ್ತದೆ, ಸಮಸ್ಯೆಗಳು ಬರುತ್ತವೆ. ತಾವು ಕೊಠಡಿಯೊಳಗೆ ಕರೆದು ಮಾತನಾಡಿ ಬಗೆಹರಿಸುವಂತಹ ಪ್ರಯತ್ನ ಮಾಡುತ್ತೀರಿ. ಆದರೆ ಎರಡೂ ಕಡೆಯವರು ಗಟ್ಟಿಯಾಗಿ ನಿಂತಾಗೆ ಇಂತಹ ಸಮಸ್ಯೆಗಳು ಉದ್ಭವವಾಗುತ್ತವೆ. ನಿನ್ನೆ ಮಾನ್ಯ ಸಿದ್ದರಾಮಯ್ಯನವರ ರಾಜೀನಾಮೆ ವಿಷಯ ಚರ್ಚೆಗೆ ಬಂದು ಬಾವಿಗೆ ಬಿದ್ದೆವು. ಮಾನ್ಯ ಅಧ್ಯಕ್ಷರೆ, ನನಗೆ ನೋವಾಯಿತು. ತಾವು ಮಾನ್ಯ ಸಿದ್ದರಾಮಯ್ಯನವರನ್ನು ತಮ್ಮ ಕೊಠಡಿಗೆ ಕರೆದು, ಮಾನ್ಯ ಸಿದ್ದರಾಮಯ್ಯನವರೆ, ಈ ತರಹ ಆಗುವುದಿಲ್ಲ, ದಯಮಾಡಿ ಇದನ್ನು ವಾಪಸ್ ತೆಗೆದುಕೊಂಡು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಒಂದು ಸಾರಿಯಾದರೂ ಅವರನ್ನು ಕೊಠಡಿಗೆ ಕರೆಸಿ ಹೇಳಲಿಲ್ಲ. ಮಾನ್ಯ ಸಿದ್ದರಾಮಯ್ಯನವರು ಪ್ರಬುದ್ಧರು, ತಿಳಿದುಕೊಳ್ಳುತ್ತಿದ್ದರು. ಅವರು ನಿಮ್ಮ ಮಾತಿಗೆ ಒಪ್ಪಲೇಬೇಕಾಗುತ್ತಿತ್ತು. ಆ ಕೆಲಸವನ್ನು ತಾವು ಮಾಡಲೇ ಇಲ್ಲ. ಅದೇ ತರಹ ಈ 150 ಕೋಟಿ ರೂಪಾಯಿಗಳ ಹಗರಣದ ಬಗ್ಗೆ ಸರ್ಕಾರದಿಂದ ಪೂರಕವಾಗಿ ಸ್ಪಷ್ಟವಾದ ಉತ್ತರವನ್ನು ಕೊಡಿಸಲಿಕ್ಕೆ ತಾವು ಪ್ರಯತ್ನ ಮಾಡಿದ್ದರೆ ಇಷ್ಟೊಂದು ಕಾಲ ಹಗರಣ ಆಗುವಂತಹ ಅವಶ್ಯಕತೆ ಇರಲಿಲ್ಲ. ಇಷ್ಟೊತ್ತಿಗೆ ಎಲ್ಲಾ ಮುಗಿದು ಏನಾದರೂ ಒಂದು ಚರ್ಚೆ ಮಾಡಲಿಕ್ಕೆ ಅನುಕೂಲವಾಗುತ್ತಿತ್ತು. ಅದಕ್ಕಿಂತ ಮುಂಚೆ BMIC ಚರ್ಚೆ ವಿಷಯವನ್ನು ಬಹಳ ಪ್ರತಿಷ್ಠೆ ವಿಚಾರವಾಗಿ ಮಾಡಿಕೊಂಡು ಬಹಳ ದೊಡ್ಡ ರಾದ್ಧಾಂತ ನಡೆಯಿತು. ಇದರ ಬಗ್ಗೆ ಚರ್ಚೆ ಕೂಡ ಅಷ್ಟೊಂದು ಪ್ರತಿಷ್ಠೆ ಪ್ರಶ್ನೆ ಆಗಬೇಕಾಗಿರಲಿಲ್ಲ. ವಿರೋಧ ಪಕ್ಷದವರು ಸಹಕಾರ ಮಾಡಿಲ್ಲ ಅನ್ನುವಂತಹ ಮಾತು ಈ ಕಡೆಯಿಂದ ಕೇಳಿ ಬರುತ್ತಿದೆ, ವಿರೋಧ ಪಕ್ಷದ ಕಡೆಯಿಂದ ಲೋಪವಾಗಿರಬೇಕು, ನಾನು ಆಗಿಲ್ಲವೆಂದು ಹೇಳುವುದಿಲ್ಲ. ಆದರೆ ತಾವು ಅಲ್ಲಿ

ಕುಳಿತಂತಹವರು, ಎರಡೂ ಕಡೆಯವರನ್ನು balance ಮಾಡಿಕೊಂಡು ಹೋಗಿ ಈ ಒಂದು ಕೆಲಸ ಮಾಡಲಿಕ್ಕೆ ಸಾಧ್ಯತೆ ಇತ್ತು. ಈಗ ನಾನು ನಿಮಗೊಂದು ಉದಾಹರಣೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, Zero hour ನಲ್ಲಿ ನಾವು ಒಂದೊಂದು ಗಂಟೆ ಚರ್ಚೆ ಮಾಡಿದ್ದೇವೆ. ನಾನು ಪಾರ್ಲಿಮೆಂಟಿನ proceedings ನೋಡಿದ್ದೇನೆ. Question Hour ಎಂದರೆ ಒಂದು ಗಂಟೆ ಕಾಲಾವಧಿ ಮಾತ್ರ ಅಲ್ಲಿದೆ. ಒಂದು ಗಂಟೆಯಲ್ಲಿ ಎಷ್ಟು ಪ್ರಶ್ನೆಗಳು ಬರುತ್ತವೋ, ಬರುತ್ತವೆ. ಇಲ್ಲದಿದ್ದರೆ ಎಲ್ಲವೂ ಲಿಖಿತ ಉತ್ತರವಾಗಿಯೇ ಹೋಗಿ ಬಿಡುತ್ತವೆ. ಅದೊಂದು ಪರಂಪರೆಯನ್ನು ನಾವು ಅನೇಕರು ಮಾಡಿಕೊಂಡು ಬಂದಿದ್ದೇವೆ. ಇಲ್ಲಿ ಪ್ರಶ್ನೋತ್ತರದ ಅವಧಿಗೂ ಕೂಡ ಯಾವುದೇ ಇತಿಮಿತಿ ಇಲ್ಲ, Zero Hourಗೂ ಕೂಡ ಯಾವುದೇ ಇತಿಮಿತಿ ಇಲ್ಲ. ಇನ್ನು ಗಮನ ಸೆಳೆಯುವ ಸೂಚನೆ ಬಗ್ಗೆ ತಾವು ಹೊಸದಾಗಿ ಬಂದಿರುವಂತಹ ಸದಸ್ಯರಿಗೆ educate ಮಾಡಬೇಕಾಗುತ್ತಿತ್ತು. What is a Calling Attention? ನೀವು ನಿಮ್ಮ ಗಮನವನ್ನು ಸರ್ಕಾರಕ್ಕೆ ಸೆಳೆಯಬೇಕು. ಅದಕ್ಕೆ ಉತ್ತರ ಕೊಡಲೇಬೇಕು ಎಂದೇನೂ ನಿಯಮದಲ್ಲಿ ಇಲ್ಲ. ಸರ್ಕಾರ ನಮ್ಮ ಸಮಸ್ಯೆಗಳನ್ನು ಗಮನಿಸಬೇಕು ಎಂದಷ್ಟೇ ಅದರಲ್ಲಿದೆ. Zero Hourನಲ್ಲಿ ಅತ್ಯಂತ ಗಂಭೀರವಾದಂತಹ ಸಮಸ್ಯೆ ಮಾತ್ರ ಮಾತನಾಡಬೇಕು. ಎಲ್ಲೋ ಒಂದು ಕಡೆ ಭೂಕಂಪವಾಗಿದ್ದರೆ, ಜನ ಏನೋ ಅನಾಹುತದಿಂದಾಗಿ ಸತ್ತಿದ್ದರೆ ಮಾತ್ರ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬೇಕು. ಆದರೆ ಎಲ್ಲವನ್ನೂ ಗಾಳಿಗೆ ತೂರಿ ಏನೆಲ್ಲಾ ವಿಷಯಗಳನ್ನು ಇಲ್ಲಿ Zero Hour ನಲ್ಲಿ ಪ್ರಸ್ತಾಪಿಸುವಂತಹ ಪದ್ಧತಿ ಶುರುವಾಗಿದೆ. ಸದನ ಪ್ರಾರಂಭದಲ್ಲೇ ದಾರಿ ತಪ್ಪಿದೆ. Zero Hourಗೂ ಬೆಲೆ ಇಲ್ಲ, ಇಲ್ಲಿ ಗಮನ ಸೆಳೆಯುವ ಸೂಚನೆಗೂ ಬೆಲೆ ಇಲ್ಲ, ಪ್ರಶ್ನೋತ್ತರ ನಡೆಯತಕ್ಕಂತ ಸಮಯಕ್ಕೂ ಕೂಡ ಇಲ್ಲಿ ಮಿತಿ ಇಲ್ಲ, ಯಾವುದಕ್ಕೂ ಇತಿಮಿತಿ ಇಲ್ಲದೆ ಇಲ್ಲಿ ಸಭೆ ನಡೆದರೆ ನಮಗೆ ಸಮಯ ಹೇಗೆ ಸಿಗುತ್ತದೆ? ಇವತ್ತು ನಾನು ಗ್ರಾಮೀಣಾಭಿವೃದ್ಧಿ ಇಲಾಖೆ ಬೇಡಿಕೆಗಳ ಮೇಲೆ ಮಾತನಾಡಬೇಕೆಂದು ಎಲ್ಲಾ ತಯಾರಿ ಮಾಡಿಕೊಂಡು ಬಂದಿದ್ದೆ. ಮಾನ್ಯ ಅಧ್ಯಕ್ಷರೆ, ಇನ್ನೂ ಕೂಡ ಸಮಯ ಮೀರಿಲ್ಲ. ಆಳುವ

ಪಕ್ಷದವರು ಮನಸ್ಸು ಮಾಡಿದರೆ, ನಾವೆಲ್ಲರೂ ಗಂಭೀರವಾಗಿ ಕುಳಿತುಕೊಳ್ಳೋಣ, 31ರವರೆಗೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ತಾವು ಆಳುವ ಪಕ್ಷದವರಲ್ಲವೇ?

ಶ್ರೀ ಬಿ.ಅರ್. ಪಾಟೀಲ್: ಆಯಿತು, ನಾವೂ ಆಳುವ ಪಕ್ಷದವರೇ. ಅನೇಕ ಸಂದರ್ಭಗಳಲ್ಲಿ ನಮ್ಮ ಮಾತನ್ನೇ ನೀವು ಕೇಳಲಿಲ್ಲ. BMIC ವಿಚಾರದಲ್ಲಿ ಕೇಳಲಿಲ್ಲ, 150 ಕೋಟಿ ರೂಪಾಯಿಗಳ ಹಗರಣದ ಬಗ್ಗೆ ನಮ್ಮ ಮಾತು ಕೇಳಲಿಲ್ಲ, ಮಾನ್ಯ ಸಿದ್ದರಾಮಯ್ಯನವರಿಗೆ ಅವಕಾಶ ಮಾಡಿಕೊಡಬೇಕು ಎಂಬ ವಿಚಾರದಲ್ಲಿ ತಾವು ನಮ್ಮ ಮಾತು ಕೇಳಲಿಲ್ಲ. ಮಾನ್ಯ ಅಧ್ಯಕ್ಷರೆ, ಆಳುವ ಪಕ್ಷದವರ ಮಾತೇ ಆಳುವ ಪಕ್ಷದಲ್ಲಿ ನಡೆಯುತ್ತಿಲ್ಲ. ವಿಚಿತ್ರವಾದಂತಹ ರಾಜಕೀಯ ಹಿನ್ನೆಲೆ ಇದಾಗಿದೆ...

(ಅಡಚಣೆ)

ಶ್ರೀ ಬಿ.ಸಿ.ಪಾಟೀಲ್: ಮಾನ್ಯ ಸದಸ್ಯರು ಯಾವ ಪಕ್ಷದವರೆಂಬುದನ್ನು ಮೊದಲು ಸ್ಪಷ್ಟ ಪಡಿಸಲಿ. ನೀವು ಹೇಳಿದಿದ್ದರೆ ತಾವು ಯಾವ ಪಕ್ಷದವರೆಂಬುದನ್ನು ಮಾನ್ಯ ಅಧ್ಯಕ್ಷರಾದರೂ ಹೇಳಬೇಕು....

ಅಧ್ಯಕ್ಷರು: ಮಾನ್ಯ ಪಾಟೀಲರು ಏನು ಹೇಳುತ್ತಿದ್ದಾರೋ ಹೇಳಲಿ.

(ಅಡಚಣೆ)

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಅವರಿಗೆಲ್ಲಾ ನಾವು ಆದರ್ಶರಾಗಬೇಕು. ನಾವು ಗ್ರಾಮಸಭೆಗಳಿಂದ ಬಹಳ ನಿರೀಕ್ಷಣೆ ಮಾಡುತ್ತಿದ್ದೇವೆ. ಇವತ್ತು ಪಾರ್ಲಿಮೆಂಟನ್ನು ನಡೆಸಲಿಕ್ಕಾಗುತ್ತಿಲ್ಲ, ವಿಧಾನ ಸಭೆ ನಡೆಸಲಿಕ್ಕಾಗುತ್ತಿಲ್ಲ, ಇನ್ನು ಗ್ರಾಮಸಭೆಗಳು ನಡೆಸಬೇಕು, ಗ್ರಾಮ ಸಭೆಗಳಲ್ಲಿ ಎಲ್ಲಾ ತೀರ್ಮಾನಗಳು ಆಗಬೇಕೆಂದು ನಾವು ಇಲ್ಲಿ ಕುಳಿತು ಚರ್ಚೆ ಮಾಡಿ, ನಿಯಮ ಮಾಡಿ, ಕಾನೂನು ಮಾಡುವುದರಲ್ಲಿ ಯಾವ ಅರ್ಥವಿದೆ? ಮಾನ್ಯ ಅಧ್ಯಕ್ಷರೆ, ಗ್ರಾಮಸಭೆಗಳನ್ನು ನಡೆಸುವುದು ಬಹಳ ಕಷ್ಟದ ಕೆಲಸ. ನಿಮ್ಮ ಕೆಲಸ, ಸ್ವಲ್ಪ ಸರಳ. ಅಲ್ಲಿ ಜಾತಿ ಗುಂಪುಗಳು, ರಾಜಕೀಯ ಗುಂಪುಗಳು, ಸ್ವಾರ್ಥಿಗಳ ಗುಂಪುಗಳ ಏನೆಲ್ಲಾ ಸೇರಿ ಅಲ್ಲಿ ಆ ಗ್ರಾಮ

ಸಭೆಯನ್ನು ನಿಯಂತ್ರಣ ಮಾಡಲಿಕ್ಕೆ ಆಗದಿರುವಂತಹ ಸಂದರ್ಭದಲ್ಲಿ ತಾವು 224 ಸದಸ್ಯರ ಸದನವನ್ನು ನಡೆಸುವಂತಹ ಜವಾಬ್ದಾರಿಯನ್ನು ಹೊತ್ತಿದ್ದೀರಿ, ನಾನು ಒಂದೇ ಒಂದನ್ನು ನಿರೀಕ್ಷೆ ಮಾಡುತ್ತೇನೆ. ನಮ್ಮ ಸಭೆಯ ಕಲಾಪಗಳು ನಮ್ಮ ಜಿಲ್ಲಾ ಪಂಚಾಯಿತಿಗಳಿಗೆ ಮಾದರಿಯಾಗಬೇಕು. ಮಾನ್ಯ ನಜೀರ್ ಸಾಬ್‌ರವರು ಒಂದು ಮಾತನ್ನು ಹೇಳಿದ್ದರು. ಮುಂದೆ ಜಿಲ್ಲಾ ಪಂಚಾಯಿತಿಗಳೂ ಕೂಡ ತಮ್ಮ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅವರೇ ಕಾನೂನು ಮತ್ತು ನಿಯಮ ಮಾಡಿಕೊಳ್ಳುವಂತಹ ಒಂದು ಹಂತಕ್ಕೆ ಜಿಲ್ಲಾ ಪಂಚಾಯಿತಿಗಳು ಮುಟ್ಟಲಿ, ರಾಜ್ಯದ ಕಾನೂನು ಮತ್ತು ರಾಜ್ಯದ ನಿಯಮಗಳು ಮಾಡಿದ್ದನ್ನು ಅಲ್ಲಿ ಅನುಸರಿಸಬಾರದು, ಅಲ್ಲಿನ ಪರಿಸ್ಥಿತಿಗನುಗುಣವಾಗಿ ಅಲ್ಲೇ ಕಾನೂನುಗಳು ಆಗಬೇಕು. ಅಲ್ಲೇ ನಿಯಮಗಳು ಆಗಬೇಕು, ಅಂತಹ ಒಂದು ಜಿಲ್ಲಾ ಪಂಚಾಯಿತಿಗಳು ನಮ್ಮಲ್ಲಿ ಆಗಬೇಕೆಂದು ಮಾನ್ಯ ನಜೀರ್‌ಸಾಬ್‌ರವರು ಕನಸು ಕಂಡಿದ್ದರು. ಮಾನ್ಯ ಅಧ್ಯಕ್ಷರೆ, ಇವತ್ತು ಈ ವಿಧಾನಸಭೆ ನಮ್ಮ ಜಿಲ್ಲಾ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಆದರ್ಶವಾಗಬೇಕು. ನಾವು ಯಾವ ತರಹ ಮಾತನಾಡುತ್ತೇವೆ? ನಾವು ಯಾವ ತರಹ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತೇವೆ? ನಾವು ಯಾವ ತರಹ ನಡವಳಿಕೆಗಳನ್ನು ನಡೆಸುಕೊಳ್ಳುತ್ತೇವೆ, ಅದೆಲ್ಲಾ ಅವರಿಗೆ ಆದರ್ಶವಾಗುತ್ತದೆ. ಹಾಗಾಗಿ ಇಂತಹ ಒಂದು ಆದರ್ಶವಾದಂತಹ ಪರಂಪರೆಯನ್ನು, ಪದ್ಧತಿಯನ್ನು ನಾವು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಒಂದು ಘಟನೆಯನ್ನು ನೆನಪಿಸಿ ನಾನು ನನ್ನ ನೋವನ್ನು ವ್ಯಕ್ತಪಡಿಸಬಯಸುತ್ತೇನೆ. ಕೆಲವರು ವಿರೋಧ ಪಕ್ಷದವರು ಬಾವಿಯಲ್ಲಿ ಬಿದ್ದರು, ಬಾವಿಯಲ್ಲಿ ಬಿದ್ದಾಗ ಈ ಕಡೆಯಿಂದ 'ಹೋ' ಎಂದು ಕೂಗಾಟ ಶುರುವಾಯಿತು. ಆಗ ಅಲ್ಲಿ ನಿಂತವರೂ ಕೂಡ 'ಹೋ' ಎಂದು ಕೂಗಾಟ ಶುರು ಮಾಡಿದರು. ಇದೇನು ಸಿನಿಮಾ ಥಿಯೇಟರ್ರಾ? ಬಸ್‌ಸ್ಟ್ಯಾಂಡೇ? ಇದೇನು ಮಾನ್ಯ ಅಧ್ಯಕ್ಷರೆ. ಇದರಿಂದ ನನ್ನ ಮನಸ್ಸಿಗೆ ಬಹಳ ದುಃಖವಾಯಿತು. ನಾವು ಜನಪ್ರತಿನಿಧಿಗಳು ಇಲ್ಲಿ ಬಂದು ರಸ್ತೆಯ ಮೇಲೆ ನಿಂತು ಮಾತನಾಡುವಂತೆ ಸಿಳ್ಳೆ ಹೊಡೆಯುವುದು, ಹೂಕಾರ ಹಾಕುವುದು,

ಇದು ಮಾಡಿದರೆ ಖಂಡಿತವಾಗಿಯೂ ಕೂಡ ನಮಗೂ ಗೌರವ ಇರುವುದಿಲ್ಲ, ಸದನಕ್ಕೂ ಗೌರವ ಇರುವುದಿಲ್ಲ. ಮಾನ್ಯ ಅಧ್ಯಕ್ಷರೆ, ಈ ತರಹ ಗಿಲಿಟಿನ್ ಹಾಕಿಕೊಂಡು ನಡೆದರೆ ಆಗುವ ದೊಡ್ಡ ಅಪಾಯವೇನು ಎಂದು ನಾನು ಇಲ್ಲಿ ಹೇಳುತ್ತೇನೆ. ಇಲ್ಲಿ ಅಧಿಕಾರಿಗಳು ಸರ್ವಾಧಿಕಾರಿಗಳಾಗುತ್ತಾರೆ, ಅಧಿಕಾರಿಗಳೇ ಈ ರಾಜ್ಯ ನಡೆಸುತ್ತಾರೆ, ...

ಶ್ರೀ ಎಸ್.ಎಲ್. ಧರ್ಮೇಗೌಡ: ಅಧಿಕಾರಿಗಳು ಸರ್ವಾಧಿಕಾರಿ ಗಳಾಗುತ್ತಾರೆ ಎಂದು ಹೇಳುವುದಲ್ಲ, ಈಗಾಗಲೇ ಅವರು ಆಗಿ ಹೋಗಿ ಬಿಟ್ಟಿದ್ದಾರೆ. ಅಧಿಕಾರಿಗಳೇ ಪೂರ್ತಿ ಎಲ್ಲಾ ಆಗಿ ಬಿಟ್ಟಿದ್ದಾರೆ. ನಮ್ಮನ್ನು ನೋಡಿ ಜನ ನಗುತ್ತಿದ್ದಾರೆ, ಅಧಿಕಾರಿಗಳೂ ನಗುತ್ತಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮೇಗೌಡರು ಹೇಳುತ್ತಿರುವುದು ಸತ್ಯ. ನಾವು ಇಲ್ಲಿ ಚರ್ಚೆ ನಡೆಸಿದರೆ ಅಧಿಕಾರಿಗಳಿಗೆ ಎಚ್ಚರವಾಗುತ್ತದೆ. ಏನು ಲೋಪ ದೋಷಗಳು ನಡೆದಿವೆ? ಆಡಳಿತದಲ್ಲಿ ಏನು ತಪ್ಪುಗಳು ನಡೆದಿವೆ? ಯಾವ ತರಹ ಸರ್ಕಾರದ ಕಾರ್ಯಕ್ರಮಗಳ ಅಳವಡಿಕೆಯಲ್ಲಿ ಅಧಿಕಾರಿಗಳು ಎಡವಿದ್ದಾರೆ? ಅದರ ಬಗ್ಗೆ ನಾವೆಲ್ಲಾ ...

ಅಧ್ಯಕ್ಷರು: ಮಾನ್ಯ ಪಾಟೀಲ್‌ರೆ, ಬೇಗ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್: ಏನು ಸಾರ್, ನಾವು ಮಾತನಾಡುತ್ತಿರುವುದು ತಮಗೆ ಸರಿ ಎನಿಸುತ್ತಿಲ್ಲವೇ? ನಾನು ಎಲ್ಲರ ಪರವಾಗಿ ಮಾತನಾಡುತ್ತಿದ್ದೇನೆ. ನಾನು ಒಬ್ಬ ಸದಸ್ಯನಾಗಿ ನೊಂದು ಮಾತನಾಡುತ್ತಿದ್ದೇನೆ. ಈ ವಿಷಯ ನನಗೇನೂ ಖುಷಿ ಕೊಡುತ್ತಿಲ್ಲ. ನಾನು ಮಾನ್ಯ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ 1983ರಲ್ಲಿ ಸದನಕ್ಕೆ ಬಂದಿದ್ದೆ. ಅವತ್ತು ಅನೇಕರು ಹೊಸಬರು ಬಂದಿದ್ದೆವು. ಆದರೆ ಅವತ್ತು ನಾವು ಕಲಿತುಕೊಂಡಿದ್ದು ಬಹಳ ಇದೆ. ಬಹಳ ಉಚ್ಚ ಪರಂಪರೆ ಆಗ ಇತ್ತು. ಮಾನ್ಯ ನಜೀರ್ ಸಾಬ್‌ರವರು, ಮಾನ್ಯ ರಾಚಯ್ಯನರು, ಮಾನ್ಯ ದೇವೇಗೌಡರು, ಮಾನ್ಯ ಹೆಗಡೆ ಅವರುಗಳು ಅವತ್ತು ಅಲ್ಲಿ ಕುಳಿತು ಮಾತನಾಡಿದ್ದರಿಂದ, ಅವರು ಅವತ್ತು ಮಾಡಿದಂತಹ ಕೆಲಸದಿಂದ ನಾವೆಲ್ಲಾ ಬಹಳಷ್ಟು ಕಲಿತುಕೊಂಡಿದ್ದೆವು. ಇವತ್ತು ಇಲ್ಲೂ ಕೂಡ ಕೆಲವರು ಅನುಭವಸಧ್ಧಿರಿದ್ದಾರೆ, ಮಾನ್ಯ ಪ್ರಕಾಶ್‌ರವರಿದ್ದಾರೆ, ಮಾನ್ಯ

ಈಶ್ವರಪ್ಪನವರು ಇದ್ದಾರೆ, ಮಾನ್ಯ ಯಡಿಯೂರಪ್ಪನವರಿದ್ದಾರೆ, ಇನ್ನೂ ಅನೇಕ ಸಂಸದೀಯ ಪಟುಗಳಿದ್ದಾರೆ. ಮಾನ್ಯ ರಾಯರೆಡ್ಡಿಯವರು ಇನ್ನೂ ಸೀನಿಯರ್ ಆಗಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ರಾಯರೆಡ್ಡಿಯವರೂ ಸಹ ಸೀನಿಯರ್ ಮೆಂಬರ್ ಆಗಿದ್ದಾರೆ. ಅವರು ತಲೆಗೆ ಡೈ ಮಾಡಿಕೊಂಡಿರುವುದರಿಂದ ಚಿಕ್ಕವರಾಗಿ ಕಾಣುತ್ತಾರೆ.

ಶ್ರೀ ಬಿ.ಆರ್. ಪಾಟೀಲ್: ಮೊದಲನೇ ಬಾರಿಗೆ ಆಯ್ಕೆಯಾದ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ಹಾಗಾಗಿ ಇಲ್ಲಿ ಈ ಪೀರಿಯಡ್‌ಗಳಿಗೇನೂ ಅರ್ಥವಿರುವುದಿಲ್ಲ. ನಮ್ಮ ಪ್ರಬುದ್ಧತೆ, ನಮ್ಮ ವಿಚಾರ, ನಮ್ಮ ನಡತೆ ಇಲ್ಲಿ ಬಹಳ ಮುಖ್ಯವಾಗುತ್ತದೆ. ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳಷ್ಟು ಜನ ಅನುಭವಸ್ಥರು, ವಿಚಾರವಂತರು ಮತ್ತು ಚಳವಳಿಯಿಂದ ಬಂದಂತಹವರು, ಚಿಂತನೆ ಮಾಡುವಂತಹ ನಾವೆಲ್ಲರೂ ಇದ್ದೇವೆ. ದಯಮಾಡಿ ತಾವು 31ರವರೆಗೆ ಅವಕಾಶ ಮಾಡಿಕೊಡಿ. ಇನ್ನೂ ಏನೂ ಅಂತಹ ಕಾಲ ಮೀರಿಲ್ಲ. ಒಂದು ಫಲಪ್ರದವಾದಂತಹ ಚರ್ಚೆಯಾಗಲಿ, ನಮ್ಮ ಇಲಾಖೆಗಳಿಗೆ ಸ್ಪಷ್ಟವಾದ ನಿರ್ದೇಶನ ಹೋಗುವಂತಹ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ಒಂದೇ ಒಂದು ಸಲಹೆ ಏನೆಂದರೆ, ಹಿಂದೆ ಕೆಲವು ವರ್ಷ Subject Committee ಗಳು ಎಂದಿತ್ತು. ದಯವಿಟ್ಟು ಹಿಂದೆ ಇದ್ದಂತೆ Subject Committee ಗಳನ್ನು ರಚಿಸುವುದು ಒಳ್ಳೆಯದು.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ...

ಶ್ರೀ ಆರಗ ಜ್ಞಾನೇಂದ್ರ: ಒಂದು ನಿಮಿಷ, ಮಾನ್ಯ ರಾಜೇಂದ್ರನ್‌ರವರೆ, ತಾವು ಯಾವಾಗಲೂ ಮಾತನಾಡುತ್ತಿರುತ್ತೀರಿ. ಸ್ವಲ್ಪ ಕಾಲಾವಕಾಶ ಕೊಡಿ, ನಾನು ಬೇಗ ಮುಗಿಸಿ ಬಿಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಸದಸ್ಯರ ಸಲಹೆ ಒಳ್ಳೆಯದಾಗಿದೆ. ಅವರು ಹೇಳಿದಂತೆ Subject Committee ಗಳನ್ನು ರಚಿಸಬೇಕು.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ...

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಆರಗ ಜ್ಞಾನೇಂದ್ರರವರು ಕೊಡುತ್ತಿರುವಂತಹ ಸಲಹೆಯನ್ನು ತಾವು ಸ್ವೀಕಾರ ಮಾಡಬೇಕು ಮತ್ತು ಸರ್ಕಾರಕ್ಕೆ ಅದನ್ನು ತಿಳಿಸಬೇಕು. ಇಲ್ಲಿ ಚರ್ಚೆಯಾಗಲಿಲ್ಲ ಎನ್ನುವಂತಹ ನೋವು ಏನಿದೆ ....

(ಅಡಚಣೆ)

ಅಧ್ಯಕ್ಷರು: ಈಗ ಇಲ್ಲಿ ಏನಾಗುತ್ತಿದೆ ಎಂದರೆ, ಇಲ್ಲಿ ಧರಣಿ ಆಯಿತು, ಮತ್ತೊಂದು ಆಯಿತು, ಗಿಲಿಟಿನ್ ಆಯಿತು. ಈಗ ಅದರ ಬಗ್ಗೆಯೇ ವ್ಯಾಖ್ಯಾನ ಮಾಡಲಾಗುತ್ತಿದೆ, ಅದರ ಅಗತ್ಯವಿಲ್ಲ. ಇವತ್ತು ಅಜೆಂಡಾದಲ್ಲಿ ಇರತಕ್ಕಂಥ ವಿಚಾರಗಳಿಗೆ ನಾವು ಹೇಗೋಣ.

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜ್: .... ಇವತ್ತು ಅವರು ನೀಡಿರುವಂತಹ ಸಲಹೆ ಏನಿದೆ, ಅದು ಯೋಗ್ಯವಾದುದು....

ಅಧ್ಯಕ್ಷರು: ಎಲ್ಲಾ ಆಗಿ ಹೋದ ಮೇಲೆ ಸುಮ್ಮನೆ ಚರ್ಚೆ ಮಾಡಿದರೆ ಏನು ಪ್ರಯೋಜನ?

ಶ್ರೀ ಹೆಚ್.ಡಿ. ಬಸವರಾಜ್: ... ಮಾನ್ಯ ಅಧ್ಯಕ್ಷರೆ, ನಮ್ಮ ಮನಸ್ಸಿನಲ್ಲಿ ನೋವು ಇದೆ. ಸರ್ಕಾರ ಏನೇನು ಒಳ್ಳೊಳ್ಳೆಯ ಕೆಲಸ ಮಾಡಿದೆಯೋ, ಇದನ್ನು ಈ ಸದನದ ಮೂಲಕ ಜನತೆಗೆ ತಿಳಿಸುವಂತಹ ಅವಕಾಶ ತಪ್ಪಿ ಹೋಗಿರುವುದಕ್ಕೆ ನಮಗೆ ನೋವು ಇದೆ.

ಆ ನೋವನ್ನು ನಾವು ಎಲ್ಲಿ ಹೇಳಿಕೊಳ್ಳಬೇಕು ಅಧ್ಯಕ್ಷರೇ? ಅದಕ್ಕೋಸ್ಕರ ಈ ಹಿಂದೆ ಇದ್ದಂತಹ ಒಂದು ಪದ್ಧತಿ ಏನೊಂದು ವಿಷಯ ಸಮಿತಿಗಳಿತ್ತೋ ಮತ್ತೆ ಅದನ್ನು ತರುವಂತಹದ್ದಾಗಬೇಕು.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ರಾಜೇಂದ್ರನ್‌ರವರೇ ಮಾತನಾಡಿ.

ಶ್ರೀ ಹೆಚ್.ಡಿ. ಬಸವರಾಜು: ನೀವು ಸುಮ್ಮನೆ ಕುಳಿತುಕೊಳ್ಳಿ ಎಂದರೆ, ನಮ್ಮ ನೋವನ್ನು ಹೇಳಿಕೊಳ್ಳುವುದು ಬೇಡವೇ?

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್): ಮಾನ್ಯ ಅಧ್ಯಕ್ಷರೆ, ಆ ಕಡೆ ಕುಳಿತುಕೊಂಡು, ಎಲ್ಲರೂ ಬಹಳ ಡಿಸಿಪ್ಲಿನ್ ಬಗ್ಗೆ ನಿಮಗೆ ಹೇಳುತ್ತಿದ್ದಾರೆ. ನೀವು ನನ್ನ ಹೆಸರನ್ನು ಕರೆದಿದ್ದಿರಿ; ಅವರದ್ದು ನಿಮಗೆ ಉಪದೇಶ, ಅದೊಂದು ಕಡೆ ಇರಲಿ. ಈಗ ನಮ್ಮ ಸೀನಿಯರ್ ಲೀಡರ್ಸ್ ಎಲ್ಲಾ ಮಾತನಾಡಿದರು, ಏನು ಹೇಳಿದರು, ಸದನ ಸರಿಯಿಲ್ಲ, ಸ್ಪೀಕರ್‌ಗೆ ಧಿಕ್ಕಾರ, ಎಲ್ಲಾ ಹೇಳಿದರು, ಧಿಕ್ಕಾರವನ್ನೆಲ್ಲಾ ನಾವೆಲ್ಲಾ ಹೇಳುವುದಿಲ್ಲ ಸ್ವಾಮಿ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಒಂದು ಸಂದರ್ಭದಲ್ಲಿ ಮಾತನಾಡುವಾಗ, a respectful senior Minister, ನೀವೆಲ್ಲಾ ಮೌನವಾಗಿದ್ದಿರಿ, ನಾವೇನು ಮಾಡುವುದಕ್ಕಾಗುತ್ತದೆ, ನಾನು ಮೌನವಾಗೇ ಇದ್ದೆ, ಮಾಧುಸ್ವಾಮಿಯವರು ಮೌನವಾಗಿದ್ದರು, ಈಗಲೂ ಮೌನವಾಗಿಯೇ ಇದ್ದಾರೆ, ಶ್ರೀರಾಮರೆಡ್ಡಿಯವರು ಮೌನವಾಗಿದ್ದಾರೆ, ಜಯಪ್ರಕಾಶ ಹೆಗ್ಡೆಯವರು ಮೌನವಾಗಿದ್ದರೆ, ನಾನು ಏಕೆ ಮೌನವಾಗಿದ್ದೆ ಗೊತ್ತಾ, ದ್ರೌಪದಿ ಸೀರೆ ಸೆಳೆಯುವ ಟೈಂನ ಬಗ್ಗೆ ಉತ್ತರವನ್ನು ಶ್ರೀರಾಮರೆಡ್ಡಿಯವರು ಕೊಟ್ಟರು, ನಿಜವಾಗಿಯೂ ನಾನು ಏತಕ್ಕೆ ಮೌನವಾಗಿದ್ದೆ ಎಂದರೆ, ಬೆಳಿಗ್ಗೆ ಸಂತಾಪ ಸೂಚನೆ, ಮಧ್ಯಾಹ್ನ ಊಟ, ನಿಮ್ಮ ಉಪ್ಪು, ಅದಕ್ಕೆ ನಾನು ಸೈಲೆಂಟ್ ಆಗಿ ಇರುತ್ತೇನೆ, ಬೇರೆ ಏನೂ ಇಲ್ಲ. ನಾನು ಏತಕ್ಕೆ ಸೈಲೆಂಟ್ ಆಗಿ ಇದ್ದೇನೆ ಎಂಬುದಕ್ಕೆ ಉತ್ತರ ಇದೇ. ನಾನು ನೆಕ್ಸ್ ಟೈಂ ಡಇಸೈಡ್ ಮಾಡಿದ್ದೇನೆ, ತಾವು ಊಟಕ್ಕೆ ಕರೆದರೂ ನಾನು ನಿಮ್ಮ ಉಪ್ಪನ್ನು ತಿನ್ನಬಾರದೆಂದು ಡಿಸೈಡ್ ಮಾಡಿದ್ದೇನೆ, ಅವತ್ತು ನಾನು ಭಾಷಣ ಮಾಡಬಹುದು. ದಿನಾ, ಆರು ದಿವಸ ಸಂತಾಪಸೂಚನೆ, ಮಧ್ಯಾಹ್ನದ ಹೊತ್ತು ಊಟ, ಮಾಡಿ ಬಿಟ್ಟು ಇಲ್ಲಿ ಬಂದು ನಾನು ಹೇಗೆ ಮಾತನಾಡುವುದಕ್ಕಾಗುತ್ತದೆ? ನಾನು ನಿಮ್ಮ ಉಪ್ಪನ್ನು ತಿಂದಿಲ್ಲವೇ? ಅದಕ್ಕೋಸ್ಕರ ನಾನು ಸುಮ್ಮನೆ ಇದ್ದೇನೆ ಸ್ವಾಮಿ. ಒಂದು ಕಡೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂಬುದು, ಮತ್ತೊಂದು ಕಡೆ ಮಾತನಾಡಲೇ ಬೇಕೆಂಬುದು, ನಿಜವಾಗಿಯೂ ಈ ಸದನದಲ್ಲಿ ಏನು ನಡೆಯುತ್ತಿದೆ ಎಂಬುದು ಎಲ್ಲಾ ಜನರಿಗೂ ಗೊತ್ತಿದೆ, ಮಾತನಾಡುವುದು ಹಕ್ಕು ಎಂದು ಹೇಳುತ್ತಾರೆ, ಮಾತನಾಡಲಿ, ಯಾವ ರೂಪದಲ್ಲಿ ಮಾತನಾಡಬೇಕು, ಈ ರೂಪದಲ್ಲಿಯೇ ಮಾತನಾಡಬೇಕೆಂದು ಹೇಳುವ

ಅವಶ್ಯಕತೆ ಇಲ್ಲ, ಇದನ್ನೆಲ್ಲಾ ಎಕ್ಸ್‌ಪ್ಲೆನ್ ಮಾಡುವುದಕ್ಕೆ ನಾವು ಇಲ್ಲಿ ಬಂದಿಲ್ಲ ಸ್ವಾಮಿ; ಕೇವಲ 150 ಕೋಟಿ ರೂಪಾಯಿಗೋಸ್ಕರ ಒಂದು ವಾರ ಚರ್ಚೆ ಮಾಡಿದೆ; ಈ ಸರ್ಕಾರ, 45,000 ಕೋಟಿ ರೂಪಾಯಿಗಳ ಬಜೆಟ್ ಅನ್ನು ಯಾವುದೇ ಚರ್ಚೆ ಇಲ್ಲದೆ ಪಾಸ್ ಆಗಿದೆ, ಕೇವಲ Rs. 150 crore. It is nothing in front of Rs. 45,000 crore. ನಾವು ರೈತರ ಬಗ್ಗೆ ಇಷ್ಟೊಂದು ಪ್ರೀತಿಯಿಂದ ಮಾತನಾಡಿ, ಭಾಷಣ ಮಾಡಿ, ಜನರಿಗೆ ಕೆಲಸ ಚೆನ್ನಾಗಿ ಮಾಡಿಕೊಡಬೇಕೆಂದೆಲ್ಲಾ ಮಾತನಾಡಿ, 45,000 ಕೋಟಿ ರೂಪಾಯಿಗಳಿಗೆ ಈಗ ಯಾರು ಉತ್ತರ ಕೊಡುವವರು? ತಾವು ಅಧ್ಯಕ್ಷರ ಸ್ಥಾನದಲ್ಲಿರುವವರು, can you just come foward and tell people as to where this Karnataka Government administration is going? ಚರ್ಚೆ ಮಾಡಲಿ, ಧರಣಿ ಮಾಡಲಿ ಯಾರಿಗೋಸ್ಕರ? 45,000 ಕೋಟಿ ರೂಪಾಯಿಗಳಿಗೋಸ್ಕರನಾ? ಇಲ್ಲ personal, ವೈಯಕ್ತಿಕವಾಗಿ, There is no doubt. ನಮಗೆ ಅವಶ್ಯಕತೆನೇ ಇಲ್ಲ, ನಾವು ಭಾಷಣ ಮಾಡುವುದು ಯಾವುದರ ಮೇಲೆ ಎಂದರೆ, ನಮ್ಮ ಊರ ಡೆವಲಪ್‌ಮೆಂಟ್, ಶೆಡ್ಯೂಲ್ಡ್ ಕಾಸ್ಟ್ ಬಗ್ಗೆ ಬೇಕಾದಷ್ಟು ಮಾತನಾಡಬೇಕು, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಬಗ್ಗೆ ಬೇಕಾದಷ್ಟು ಮಾತನಾಡಬೇಕು ಕೇವಲ ಒಂದು ಟೈಲರಿಂಗ್ ಮೆಷಿನ್ ಅನ್ನು ಬ್ಯಾಕ್‌ವರ್ಡ್‌ಕ್ಲಾಸ್ ಡಿಪಾರ್ಟ್‌ಮೆಂಟ್‌ನಲ್ಲಿ 1500–200 ರೂ. ನ ಟೈಲರಿಂಗ್ ಮೆಷಿನ್ ತೆಗೆದುಕೊಳ್ಳಬೇಕಾದರೆ ರೂ.200 ಬಾಂಡ್ ಪೇಪರ್, ಷ್ಯೂರಿಟಿ ಅವನ ನೋಟರಿ ಸರ್ಟಿಫಿಕೇಟ್ ಇದೆಲ್ಲಾ ಖರ್ಚುಗಳೆಲ್ಲಾ ರೂ.600 ಆಗುತ್ತದೆ; ಅಂತಹ ಬಡತನ ಬಗ್ಗೆ ಭಾಷಣ ಮಾಡಲು ಬಮದಿರುವವರು ನಾವು; ಆ ರೂ.2000 ಟೈಲರಿಂಗ್ ಮೆಷಿನ್ ತೆಗೆದುಕೊಳ್ಳಲು ಯಾರು ಕ್ಯೂನಲ್ಲಿದ್ದಾನೆ, ಅವನ ಬಗ್ಗೆ ಭಾಷಣ ಮಾಡಲು ಬಂದಿರುವವರು ನಾವು. ನಮಗೆಲ್ಲಾ ಒಂದು ವಾರ ಊಟವೆಲ್ಲಾ ಕೊಟ್ಟು, ಎ.ಸಿ. ರೂಂನಲ್ಲಿ ಕೂರಿಸಿ, ಕಾರ್ ಕೊಟ್ಟಿಲ್ಲ ಸ್ವಾಮಿ, ಅದನ್ನು ಕೊಟ್ಟುಬಿಟ್ಟರೆ ತುಂಬಾ ಸಂತೋಷವಾಗುತ್ತದೆ; ನಾವು ಊರಿಗೆ ಹೋಗುತ್ತೇನೆ, ಅಲ್ಲಿ ಊರಿನಲ್ಲಿ ಊರಿನ ಜನರೆಲ್ಲಾ ನಮಗೆ ಗಾರ್ಲೆಂಡ್ ಹಾಕಿ ನಮ್ಮ ಬಗ್ಗೆ ಅಲ್ಲಿ ಬಹಳ ಚೆನ್ನಾಗಿ ಭಾಷಣ ಮಾಡಿ ಬಂದಿದ್ದೀರಿ, ನಿಮ್ಮ

ಅಧ್ಯಕ್ಷರಿಗೆಲ್ಲಾ ಧಿಕ್ಕಾರವೆಂದು ಹೇಳಿ ಬಂದಿದ್ದೀರಿ, ನಿಮ್ಮ ಗೌರವವೆಲ್ಲಾ ನಮಗೆ ಗೊತ್ತಿದೆ, ನೀವೇನು ನಮಗೆ ಉಪದೇಶ ಮಾಡುವುದು ಹೋಗಿರಿ; ನಿಮ್ಮ ಶಾಸನ ಸಭೆನಲ್ಲಿ ನಿಮ್ಮ ಅಧ್ಯಕ್ಷರಿಗೆಲ್ಲಾ ಧಿಕ್ಕಾರ ಹೇಳುತ್ತೀರಿ, ಇಲ್ಲಿ ನಿಮಗೆ ಧಿಕ್ಕಾರ ಹೇಳುತ್ತೇವೆಂದು ನಮಗೆ ಹೇಳುತ್ತಾರೆ, ನಾವು ಎಂತಹ ಸ್ಥಿತಿ ಹೋಗಿದ್ದೇವೆ? whoever it may be. He may get angry. ಸದನದೊಳಗೆ ಏನು ನಡೆಯುತ್ತಿದೆ? ನೆಕ್ಸ್ ಡೇ ಪೇಪರ್‌ನಲ್ಲಿ ಅಪಾಲಜಿ, ಮುಂದೆ ಧಿಕ್ಕಾರ, ಕೊಲೆ ಮಾಡುತ್ತೇವೆ, ಬೆದರಿಕೆ, ಇದನ್ನೆಲ್ಲಾ ನೋಡಿದ್ದೇವೆ, ಆದರೆ ನಮಗಿರುವ ಗೌರವವಿರುವುದೇನು? ಸೀನಿಯರ್ ಮೋಸ್ಟ್ ಸದಸ್ಯರಾದ ಡಿ. ಮಂಜುನಾಥ್ ರವರು ಇಡೀ ದೇಶಕ್ಕೆ ಕರ್ನಾಟಕ ನಂಬರ್ ಒನ್ ಎಂದು ಹೇಳಿದರು, ಈಗ ನಂಬರ್ ಒನ್ ಯಾವುದರಲ್ಲಿ ಎಂಬುದು ಗೊತ್ತಾಗುತ್ತದೆ. ಮುಖ್ಯಮಂತ್ರಿಗಳು ಲೈವ್ ಟೆಲಿಕಾಸ್ಟ್ ಇಟ್ಟಿದಿದ್ದರೆ ಕೆಟ್ಟ ಹೆಸರು ಬರುತ್ತಿತ್ತು; ಒಳ್ಳೆಯ ರೀತಿಯಾಗಿ ಲೈವ್ ಟೆಲಿಕಾಸ್ಟ್ ಕಟ್ ಮಾಡಿಕೊಂಡಿರಿ, ಲೈವ್ ಟೆಲಿಕಾಸ್ಟ್ ಇಟ್ಟಿದ್ದರೆ ನಮ್ಮ ಗೌರವ ಇನ್ನೂ ಹೊರಗಡೆಗೆ ಹೋಗುತ್ತದೆ; ಎಸ್. ಗೌರವವೆಲ್ಲಾ ಹೋಗುತ್ತದೆ, 45,000 ಕೋಟಿ ರೂಪಾಯಿಗಳ ಬಜೆಟ್ ಅನ್ನು ಚರ್ಚೆ ಇಲ್ಲದೆ ಹಾಗೆ ಪಾಸ್ ಮಾಡಿದರೆಂದು ಆ ಜನಕ್ಕೆಲ್ಲಾ ಗೊತ್ತಾಗುತ್ತದೆ, These are symptoms of bad. ಅದಕ್ಕೆ ಕಾರಣ ಯಾರಾದರೂ ಇರಲಿ ಸ್ವಾಮಿ, ನಾನು ಕಾರಣ, ನಿಮ್ಮ ಪರವಾಗಿ ಹೇಳಿಬಿಟ್ಟರೆ, ಇವರು ಧಿಕ್ಕಾರ ಹೇಳುತ್ತಾರೆ, ಇವರ ಪರವಾಗಿ ಹೇಳಿದರೆ, ನೀವು ಧಿಕ್ಕಾರ ಹೇಳುತ್ತಿರಿ, ಸತ್ಯ ಹೇಳುತ್ತೇವೆ, ಸತ್ಯ ಹರಿಶ್ಚಂದ್ರರು ಇದ್ದರೆ ಹೇಳುತ್ತೇವೆ, ಸತ್ಯ ಹರಿಶ್ಚಂದ್ರರೇ ಇಲ್ಲವೇ; ನಾವೆಲ್ಲಾ ಸುಳ್ಳು ಹರಿಶ್ಚಂದ್ರರಾಗಿದ್ದೇವೆ.

ಶ್ರೀ ಎಸ್.ಎಲ್. ಧರ್ಮೇಗೌಡ: ರಾಜೇಂದ್ರರವರೇ, ಇಷ್ಟೆಲ್ಲಾ ಮಾತನಾಡಿದ ನೀವು, ನ್ಯಾಯ ಮಾತನಾಡಲಿಲ್ಲವೆಂದರೆ, ನೀವು ಮಾತನಾಡಿದ್ದಕ್ಕೆ ಅರ್ಥ ಬರುವುದಿಲ್ಲ; ಇಲ್ಲಿ ನಿಂತುಕೊಂಡು ಈಗ ನ್ಯಾಯ ಹೇಳಲೇ ಬೇಕು.

ಶ್ರೀ ಎನ್. ರಾಜೇಂದ್ರನ್: ನ್ಯಾಯ ಹೇಳಬೇಕೆಂದರೆ, ಅಧ್ಯಕ್ಷರ ಸ್ಥಾನಕ್ಕೆ ನನ್ನನ್ನು ಕಳುಹಿಸಬೇಕು, ಕಳುಹಿಸುತ್ತಿರಾ? ಕಳುಹಿಸಿ, ಅಲ್ಲಿ ಹೋಗಿ ನಾನು ನ್ಯಾಯ ಹೇಳುತ್ತೇನೆ, ನನ್ನನ್ನು ಅಲ್ಲಿಗೆ ಕಳುಹಿಸುವುದಿಲ್ಲ, ಇಲ್ಲಿ ಕುಳಿತುಕೊಂಡು ನೀವು ನ್ಯಾಯ ಹೇಳಿದರೆ ಅಧ್ಯಕ್ಷರು ಒಪ್ಪಿಕೊಳ್ಳುತ್ತಾರಾ?

ಶ್ರೀ ಬಿ.ಸಿ. ಪಾಟೀಲ್: ನೀವು ನ್ಯಾಯಯುತವಾಗಿದ್ದೇವೆಂದು ಪ್ರೂವ್ ಮಾಡಿಬಿಡಿ, ಆಮೇಲೆ ಕಳುಹಿಸುವ ಬಗ್ಗೆ ಯೋಚನೆ ಮಾಡೋಣ.

Sri S. Rajendran: To be frank, Mr. Speaker, all my senior leaders are most experienced personalities. I have no right to comment on them. ಆದರೆ ನಾವು ಇಷ್ಟುವರೆಗೆ ಸೈಲೆಂಟ್ ಆಗಿರುವುದಕ್ಕೆ ಎಂ.ಪಿ. ಪ್ರಕಾಶ್ ಆಗಲಿ, ಸರ್ಕಾರವಾಗಲಿ, they must appreciate us. We have not disturbed anbody. We have not disturbed anybody either Sri Siddaramaiah or my Opposition side. We have not disturbed anybody. We are keenly watching what is happening in this House? Not for universal problem; They are personal problems which have been created & it spoiled the entire five crore people' money. We have not got an opportunity to explain about our feelings. Therefore, I feel sorry.

ನಿಮ್ಮ (ಅಧ್ಯಕ್ಷರ) ಮೇಲೆ ನನಗೆ ಅಪಾರವಾದ ಗೌರವವಿದೆ, ನಿಜವಾಗಿಯೂ ಹೇಳುತ್ತೇನೆ, ನಿಮ್ಮ ಪ್ರೀತಿಗೆ ನಾವು ಗೌರವ ಕೊಡಬೇಕೆಂದು ಪಾಸ್ ಮಾಡುವವರು ನಾವೇ ನಿಮಗೆಲ್ಲಾ ಧಿಕ್ಕಾರವೆಂದು ಹೇಳಿದ್ದಕ್ಕೆ On behalf of myself and my party, I apologise if anything mistakes from my side or my friends' side. For having given me this opportunity, I am thankful to you. Thank you very much,

ಶ್ರೀ ಎಸ್.ಎಸ್. ಪಾಟೀಲ್: ನಾನು ಹೇಳಿದ್ದಕ್ಕೆ ಎಂ.ಪಿ. ಪ್ರಕಾಶ್‌ರವರು ಸ್ವಲ್ಪ ಹೇಳಬೇಕಲ್ಲಾ, ಸರ್ಕಾರ ಮಾಡಿದ್ದು ಸರಿಯೋ ತಪ್ಪೋ ಎಂದು ದಯವಿಟ್ಟು ಹೇಳಬೇಕಾಗುತ್ತದೆ, ದಯವಿಟ್ಟು ಹೇಳಿಬಿಡಿ, ನಿರ್ವಹಣಾ ಮುಂಗಡಪತ್ರವನ್ನು ಮಂಡಿಸದೆ ಮಂಜೂರು ಮಾಡಿಕೊಂಡು ಹೋದರಲ್ಲಾ, ಅದು ಸರಿಯೋ ಹೇಗೆ ಎಂದು ತಾವು ಹಿರಿಯರು ಹೇಳಿಬಿಡಿ, ನಮ್ಮ ಡಿ. ಮಂಜುನಾಥರವರು ಹೊರಗೆ ಹೋಗಿಬಿಟ್ಟರು, ಅವರು ಅಲ್ಲಿ ಕುಳಿತು ಹೀಗೆ

ನಡೆಸಿದರೊ ಹೇಗೆ ಎಂದು ಕೇಳುತ್ತಿದ್ದೇನೆ, ಅದರ ಬಗ್ಗೆ ದಯವಿಟ್ಟು ಪ್ರಕಾಶ್‌ರವರು ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಪರಸ್ಪರ ಮಾತನಾಡುವುದರಿಂದ, ಏನೂ ಪ್ರಯೋಜನವಿಲ್ಲ, ಇವತ್ತು ಅಜೆಂಡಾದಲ್ಲಿ ಏನಿದೆ, ಆ ಪ್ರಕಾರ ಹೋಗೋಣ, ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಸ್.ಬಿ. ಪಾಟೀಲ್, ಅಪರ ಕಾರ್ಯದರ್ಶಿಗಳು: ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಭಾರತದ ಘನತೆವೆತ್ತ ರಾಷ್ಟ್ರಾಧ್ಯಕ್ಷರಿಂದ ಪುನರ್ ಪರಿಗಣನೆಗೆ ಹಿಂತಿರುಗಿಸಲ್ಪಟ್ಟಂತೆ ಹಾಗೂ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ವರದಿಯನ್ನೊಪ್ಪಿಸುವುದು

ಶ್ರೀ ಡಿ.ಆರ್. ಪಾಟೀಲ್ (ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ಸರ್ಕಾರಿ ಭರವಸೆಗಳ ಸಮಿತಿಯ ಮೊದಲನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ಒಪ್ಪಿಸಲಾಯಿತು.

ಶ್ರೀ ಬಸವರಾಜ ರಾಯರೆಡ್ಡಿ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ): ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಐದು ಹಾಗೂ ಆರನೇ ವರದಿಗಳನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ಒಪ್ಪಿಸಲಾಯಿತು.

4. ಚುನಾವಣಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ 3.7.06ರಂದು ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸಲಿಕ್ಕೆ ಚುನಾವಣಾ ಪ್ರಸ್ತಾವನೆಯನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮಗಳ ವೇಳಾ